## ನೈತಿಕತೆಯನ್ನು ನಿಷ್ಕರ್ಷಿಸುವ ತತ್ವಗಳು

ನೈತಿಕತೆಯ ಕುರಿತಾದ ದೃಷ್ಟಿಕೋನಗಳು ಸ್ಥಳದಿಂದ ಸ್ಥಳಕ್ಕೆ, ಕಾಲದಿಂದ ಕಾಲಕ್ಕೆ, ವ್ಯಕ್ತಿಯಿಂದ ವ್ಯಕ್ತಿಗೆ ಅಪಾರವಾಗಿ ಭಿನ್ನವಾಗಿರುತ್ತವೆ ಎಂಬುದು ಪರಂಪರಾಗತ ವಿವೇಚನೆ. ಯಾವುದನ್ನು ನೈತಿಕ ಎಂದು ಘೋಷಿಸಲಾಗಿರುತ್ತದೋ ಅವು ಅನೇಕ ವೇಳೆ ವಿಭಿನ್ನವಾಗಿರುತ್ತವೆ ಎನ್ನುವುದು ಖಂಡಿತವಾಗಿಯೂ ಸತ್ಯ. ಆದರೆ ಇದರ ಅರ್ಥ ನೈತಿಕತೆಗೆ, ಸಾಂಸ್ಕೃತಿಕ ಹಾಗೂ ಐತಿಹಾಸಿಕ ಕಾಲಘಟ್ಟಗಳಲ್ಲಿ ಗುರುತಿಸಲಾಗುವಂತಹ, ಒಪ್ಪಿಕೊಳ್ಳಲಾಗುವಂತಹ ನಿಖರ ಸೀಮಾಂಕಿತ ಗುಣಲಕ್ಷಣಗಳು ಇಲ್ಲವೆಂದಲ್ಲ. ಅಂತಹ ಐದು ನಿಖರವಾದ ಗುಣಲಕ್ಷಣಗಳು ಇವೆಯೆಂದು ನಾನು ಈ ಅಧ್ಯಾಯದಲ್ಲಿ ವಾದಿಸುತ್ತೇನೆ, ಹಾಗೂ ಪ್ಲೇಟೊ, ಕ್ಯಾಂಟ್, ಹ್ಯೂಮ್, ಮಿಲ್, ಮೂರ್, ಈವಿಂಗ್ ಅಥವಾ ಬ್ಲಾಕ್ ಬರ್ನ್‌ನಂತಹ ವಿಭಿನ್ನ ತತ್ವಜ್ಞಾನಿಗಳು ಗಣನೀಯ ಪ್ರಮಾಣದ ನಿರ್ದಿಷ್ಟ ಭಿನ್ನಾಭಿಪ್ರಾಯಗಳು ಇದ್ದಂತಹ ವಿಶಿಷ್ಟ ನೈತಿಕ ಸಿದ್ಧಾಂತಗಳನ್ನು ಅನುಮೋದಿಸುತ್ತಿದ್ದರೂ ಸಹ, ಅವರು ಹಾಗೂ ಇತಿಹಾಸದುದ್ದಕ್ಕೂ ಕಂಡುಬರುವಂತಹ ಬಹುತೇಕ ಇತರೆ ತತ್ವಜ್ಞಾನಿಗಳು ಈ ಐದು ಗುಣಲಕ್ಷಣಗಳು ಮೂಲಭೂತ ನೈತಿಕ ತತ್ವಗಳನ್ನು ಪ್ರತಿನಿಧಿಸುತ್ತವೆಂಬುದನ್ನು ಒಪ್ಪಿಕೊಳ್ಳುತ್ತಾರೆ ಎಂದು ಪ್ರತಿಪಾದಿಸುತ್ತೇನೆ. ಅತ್ಯಂತ ಸಾಧಾರಣ ಜನರು ತಮ್ಮ ತರ್ಕವನ್ನು ಈ ರೀತಿ ಸ್ಪಷ್ಟವಾದ ಮಾತುಗಳಲ್ಲಿ ವ್ಯಕ್ತಪಡಿಸದಿದ್ದರೂ ನೈತಿಕತೆಯ ಕುರಿತು ಅವರು ಹೇಗೆ ಭಾವಿಸುತ್ತಾರೆ ಎನ್ನುವುದರ ಜೊತೆಗೂ ಈ ತತ್ವಗಳು ಅನುರಣಿಸುತ್ತವೆ ಅಥವಾ ಹೊಂದಿಕೊಳ್ಳುತ್ತವೆ ಎಂದೆನಿಸುತ್ತದೆ. ಪ್ರಾಯಶಃ ಇತರ ತತ್ವಜ್ಞಾನಿಗಳು ನಾನು ಬಳಸುವಂತಹ ಭಾಷೆಯನ್ನು ಬಳಸದಿರಬಹುದು ಅಥವಾ ನಾನು ವಾದಿಸುವ ರೀತಿಯಲ್ಲಿ ವಾದಿಸದೇ ಇರಬಹುದು. (ಇಲ್ಲಿ ಮಂಡಿಸಲಾಗಿರುವ ತತ್ವಗಳನ್ನು ಪಾಶ್ಚಿಮಾತ್ಯ ಸಂಪ್ರದಾಯದ ತತ್ವಶಾಸ್ತ್ರೀಯ ಚಿಂತನೆಗೆ ಸೇರಿರುವ ಮಾದರಿಯಲ್ಲಿ ಪ್ರತಿಪಾದಿಸಲಾಗಿದೆ ಮತ್ತು ಅಭಿವ್ಯಕ್ತಿಸಲಾಗಿದೆ ಎನ್ನುವುದನ್ನು ಅಲ್ಲಗಳೆಯಲಾಗದಿದ್ದರೂ, ಇತರ ಪ್ರಧಾನ ಸಂಪ್ರದಾಯಗಳಾದ ಕನ್ಫ್ಯೂಷಿಯನ್ ಮತ್ತು ಬೌದ್ಧಧರ್ಮಗಳಿಂದ ಸಹಭಾಜಿತಗೊಂಡ (shared) ಮೌಲ್ಯಗಳನ್ನು ಇದು ಪ್ರತಿನಿಧಿಸುತ್ತದೆಂದು ಸಹ ನಾನು ನಂಬಿದ್ದೇನೆ. ಆದರೆ ಆ ಆಲೋಚನೆಯನ್ನು ನಾನು ಇಲ್ಲಿ ಮುಂದುವರೆಸುವುದಿಲ್ಲ.)

ಮೊದಲನೆಯ ತತ್ವವು ನ್ಯಾಯಪರತೆಗೆ ಸಂಬಂಧಿಸಿದ್ದು. ನೈತಿಕತೆಯು ಸಹಜವಾಗಿಯೇ ಬೇರೆ ಎಲ್ಲದರೊಂದಿಗೆ ನ್ಯಾಯಪರತೆಗೆ ಸಂಬಂಧಿಸಿದ್ದು ಎನ್ನುವುದನ್ನು, ಯಾವುದೇ ವ್ಯಕ್ತಿ ತನ್ನ ನಿರ್ದಿಷ್ಟ ನೈತಿಕ ಮೌಲ್ಯಗಳು ಹಾಗೂ ಸಾಮಾನ್ಯ ಧೋರಣೆಯು ಏನೇ ಆಗಿದ್ದರೂ ಹೇಗೆ ತಾನೇ ಅಲ್ಲಗಳೆಯಲು ಸಾಧ್ಯ? ನ್ಯಾಯಪರತೆಯಿಂದಿರುವುದು ನೈತಿಕ ಪರಿಗಣನೆಯೇನಲ್ಲ ಎಂದು ಯಾರಾದರೂ ವಾದಿಸುವುದನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ನ್ಯಾಯಪರತೆ ಹೊಂದಿಲ್ಲದ ಅಥವಾ ನ್ಯಾಯಪರರಾಗಿ ನಡೆದುಕೊಳ್ಳದ, ನ್ಯಾಯಪರರಾಗಿರುವುದಕ್ಕೆ ಅಂತಹ ಒಳ್ಳೆಯ ಕಾರಣವೇನೂ ಇಲ್ಲವೆಂದು ಪ್ರತಿಪಾದಿಸುವಂತಹ ಜನರೂ ಸಹ ಪ್ರಾಯಶಃ ಇದ್ದಾರೆ. ಕೆಲವೊಂದು ಸಲ ವ್ಯಕ್ತಿಯು ಒಂದು ನಿರ್ದಿಷ್ಟ ಪರಿಸ್ಥಿತಿಯಲ್ಲಿ ಅನ್ಯಾಯಯುತವಾಗಿ ನಡೆದುಕೊಳ್ಳುವುದನ್ನು ಸಮರ್ಥಿಸಿಕೊಳ್ಳಲು ಪ್ರಯತ್ನಿಸಬಹುದು. ಆದರೆ ಇಲ್ಲಿ ಚರ್ಚಿಸುತ್ತಿರುವ ವಿಷಯಕ್ಕೆ ಸಂಬಂಧಿಸಿದಂತೆ ಅದ್ಯಾವುದೂ ಯಾವುದೇ ವ್ಯತ್ಯಾಸವನ್ನೂ ಉಂಟು ಮಾಡುವುದಿಲ್ಲ. ಒಂದು ಅರ್ಥದಲ್ಲಿ ಅನ್ಯಾಯಯುತವಾಗಿ ನಡೆದುಕೊಳ್ಳುವುದು ನ್ಯಾಯೋಚಿತವೆಂಬ ಸಂದರ್ಭಗಳು ಖಂಡಿತವಾಗಿಯೂ ಬರಬಹುದು: ನಾವು ಕಂಡ ಹಾಗೆ ಜೀವನದಲ್ಲಿ ಕೆಲವು ಸಲ ಹೊಯ್ದಾಟಗಳನ್ನು ಅನುಭವಿಸುತ್ತೇವೆ, ಆಗ 'ಎರಡು

ಕೆಡಕುಗಳಲ್ಲಿ ಕಡಿಮೆ ಕೆಡಕು' ಯಾವುದೋ ಅದನ್ನು ಮಾಡದೇ ಬೇರೆ ದಾರಿಯೇ ಕಾಣುವುದಿಲ್ಲ. ತಮ್ಮ ಮಕ್ಕಳನ್ನು ಸಂಪೂರ್ಣವಾಗಿ ನ್ಯಾಯಪರವಾದ ರೀತಿಗಳಲ್ಲಿ ನಡೆಸಿಕೊಳ್ಳದೇ ಇರುವುದಕ್ಕೆ ಸಕಾರಣಗಳಿರುತ್ತವೆ ಎನ್ನುವುದು ಯಾವುದೇ ಪೋಷಕರಿಗೆ ತಿಳಿದಿರುತ್ತದೆ. ಹೆಚ್ಚು ವಿಶಾಲವಾಗಿ ನೋಡಿದರೆ, ಉದಾಹರಣೆಗೆ, ನಮ್ಮ ತೆರಿಗೆ ಪದ್ಧತಿಯ ಹಲವಾರು ಲಕ್ಷಣಗಳು ಒಂದು ಪ್ರಮಾಣದಲ್ಲಿ ಅನ್ಯಾಯಯುತವಾಗಿದ್ದರೂ ಸಹ ಅವು ನೈತಿಕವಾಗಿ ಸಮರ್ಥನೀಯವಾದವು ಎಂದು ಅನೇಕರು ವಾದಿಸುತ್ತಾರೆ. ಹಾಗಾಗಿ ನಮ್ಮಲ್ಲಿ ಬಹಳಷ್ಟು ಜನರಿಗೆ ಕೆಲವು ಸಂದರ್ಭಗಳು ಹೇಗೆ ಅನ್ಯಾಯಯುತವಾಗಿರುತ್ತವೆ ಎನ್ನುವುದರ ಅರಿವಿದೆ ಹಾಗೂ ಅದನ್ನು ಕ್ಷಮಿಸಲೂ ಸಹ ಸಿದ್ಧರಿರುತ್ತೇವೆ. ಆದರೆ ಅದರ ಅರ್ಥ ನಮಗೆ ನ್ಯಾಯಪರತೆಯನ್ನು ನೈತಿಕತೆಯ ಒಂದು ಪರಿಗಣನೆಯಾಗಿ ನೋಡಲು ಸಾಧ್ಯವಿಲ್ಲ ಎನ್ನುವುದಲ್ಲ. ಹಾಗೆಯೇ, ಕೆಲವರು ಅನ್ಯಾಯಯುತವಾಗಿ ನಡೆದುಕೊಳ್ಳುತ್ತಾರೆ ಅಥವಾ ಅವರು ನ್ಯಾಯಪರತೆಯ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ ಎಂದು ಪ್ರತಿಪಾದಿಸುತ್ತಾರೆ ಎಂಬುದು, ಕೇವಲ ಕೆಲವರಿಗೆ ನೈತಿಕವಾಗಿರುವುದರ ಬಗ್ಗೆ ಯಾವುದೇ ಕಾಳಜಿಯಿಲ್ಲ ಎನ್ನುವುದನ್ನು ತೋರಿಸುತ್ತದೆ. 'ನಾನು ನೈತಿಕವಾಗಿರುವುದರ ಬಗ್ಗೆ ಅಪಾರವಾಗಿ ಕಾಳಜಿ ವಹಿಸುತ್ತೇನೆ. ಆದರೆ ನ್ಯಾಯಪರವಾಗಿರುವುದಕ್ಕೆ, ಅದಕ್ಕಾಗಿ ಪ್ರಯತ್ನಿಸುವುದಕ್ಕೆ ನನಗೆ ಯಾವುದೇ ಸಕಾರಣಗಳಿಲ್ಲ ಎಂದು ಯಾರೂ ಸುಸಂಬದ್ಧವಾಗಿ ಹೇಳಲಾಗಿಲ್ಲ ಅಥವಾ ನನಗೆ ತಿಳಿದಿರುವ ಮಟ್ಟಿಗೆ ಇದುವರೆಗೂ ಹೇಳಲು ಪ್ರಯತ್ನಿಸಿಲ್ಲ.

ಬೇರೆ ಮಾತುಗಳಲ್ಲಿ ಹೇಳಬೇಕೆಂದರೆ, ನೀವು ಯಾವುದೇ ನಿರ್ದಿಷ್ಟ ನೈತಿಕ ಧೋರಣೆಯನ್ನು ಹೊಂದಿದ್ದರೂ, ನೀವು ಯಾವುದೇ ನಿರ್ದಿಷ್ಟ ನೀತಿ ಸಂಹಿತೆಯನ್ನು ಆಯ್ಕೆ ಮಾಡಿಕೊಂಡಿದ್ದರೂ, ನೈತಿಕತೆಯ ಮೂಲ ಕಲ್ಪನೆಯಲ್ಲೇ ನ್ಯಾಯಪರತೆಯು ಹಾಸುಹೊಕ್ಕಾಗಿದೆ. ಜನರಿಗೆ ಸಮಾನ ಕೆಲಸಕ್ಕೆ ಸಮಾನ ಪ್ರತಿಫಲವು ಸಿಗಬೇಕು ಅಥವಾ ಎಳೆಯರಿಗಿಂತ ಹಿರಿಯರು ಹೆಚ್ಚಿನ ಪ್ರತಿಫಲಕ್ಕೆ ಅರ್ಹತೆ ಹೊಂದಿದ್ದಾರೆ ಎಂದು ನೀವು ಹೇಳುವುದಾದರೆ ಈ ಎರಡೂ ಪ್ರಕರಣಗಳಲ್ಲೂ ನೀವು ಹೇಳುತ್ತಿರುವುದರ ಅರ್ಥ ಏನೆಂದರೆ, ನೀವು ಬೆಂಬಲಿಸುವ ಹಂಚಿಕೆಯು ನ್ಯಾಯಪರವಾದದ್ದು ಎಂದು. ಪ್ರಾಯಶಃ ಇದು 'ನ್ಯಾಯಪರತೆಯು' 'ನೈತಿಕತೆ'ಗೆ ಕೇವಲ ಪರ್ಯಾಯ ಪದ ಎನ್ನುವ ಅರ್ಥ ಕೊಡುತ್ತದೆಯೇ? ಇಲ್ಲ, ಅದರ ಅರ್ಥ ಹಾಗಲ್ಲ. ನ್ಯಾಯಪರತೆಯಿಂದಲೇ ವರ್ತಿಸುತ್ತಿದ್ದರೂ ಸಹ ನೈತಿಕವಾಗಿರಲು ವಿಫಲರಾಗಬಹುದು. ನೈತಿಕತೆಯು ನ್ಯಾಯಪರತೆಗಿಂತಲೂ ಹೆಚ್ಚಿನದು, ಆದರೆ ನ್ಯಾಯಪರತೆಯು ನೈತಿಕತೆಯ ಅನಿವಾರ್ಯ ಅಂಶವೆಂಬುದು ಯಾವುದೇ ಧೋರಣೆ ಹೊಂದಿದ್ದವರೂ ಒಪ್ಪವಂಥದ್ದು ಎನ್ನುವುದನ್ನು ನಾವು ಮುಂದೆ ಕಾಣಲಿದ್ದೇವೆ.

ಅನೇಕ ಇತರ ಪದಗಳಿದ್ದು, 'ನ್ಯಾಯ', 'ನಿಷ್ಪಕ್ಷಪಾತತೆ' ಹಾಗೂ 'ಸಮಾನತೆ' ಎಂಬವು, ಇಲ್ಲಿ ಪರಿಗಣಿಸಬೇಕಾದ ಗಮನಾರ್ಹ ಪದಗಳು. ದುರದೃಷ್ಟವಶಾತ್, ಈ ಯಾವುದೇ ಪದಗಳನ್ನು ಖಚಿತವಾದ, ವಿಶಿಷ್ಟ ಅರ್ಥಕ್ಕೆ ತಾರ್ಕಿಕವಾಗಿ ಕಟ್ಟಿಹಾಕಲು ಸಾಧ್ಯವಿಲ್ಲ. ವಾಸ್ತವಾಂಶವೇನೆಂದರೆ ಬೇರೆ ಬೇರೆ ವ್ಯಕ್ತಿಗಳು ಅವುಗಳನ್ನು ಸ್ವಲ್ಪ ವಿಭಿನ್ನವಾಗಿ ಬಳಸುತ್ತಾರೆ ಹಾಗೂ ಒಂದೇ ಜನರೇ ಬೇರೆ ಬೇರೆ ಸಂದರ್ಭಗಳಲ್ಲಿ ಅವುಗಳನ್ನು ವಿಭಿನ್ನವಾಗಿ ಬಳಸುತ್ತಾರೆ. ಇದರ ಪರಿಣಾಮವಾಗಿ ವಿವಿಧ ಪದಗಳು ಕೆಲವು ಸಂದರ್ಭಗಳಲ್ಲಿ ಪರ್ಯಾಯ ಪದಗಳಂತೆ ಕೆಲಸ ಮಾಡುತ್ತವೆ, ಇನ್ನು ಕೆಲವು ಸಂದರ್ಭಗಳಲ್ಲಿ ಹಾಗೆ ಮಾಡುವುದಿಲ್ಲ. ಹಾಗಾಗಿ ನಾನು ಈ ಪದಗಳನ್ನು ಹೇಗೆ ಪ್ರತ್ಯೇಕಿಸಿ ನೋಡುತ್ತೇನೆ ಎನ್ನುವುದರ

ತೀರ್ಮಾನಗಳನ್ನು ನೀವು ಮುಂದೆ ನೋಡಲಿದ್ದೀರಿ: ಮುಖ್ಯವಾದ ವಿಷಯವೇನೆಂದರೆ ನಾವು ವಿವಿಧ ಪದಗಳನ್ನು ಹೇಗೆ ಬಳಸಲು ಇಷ್ಟಪಟ್ಟರೂ, ನಾನು ಸೂಚಿಸುವಂತಹ ವ್ಯತ್ಯಾಸಗಳು ಉಳಿಯುತ್ತವೆ.

ನ್ಯಾಯಪರತೆಯು ಸಮಾನತೆಯನ್ನು ಸೂಚಿಸುತ್ತದೆ ಹಾಗೂ ಪ್ರಾಯಶಃ ನ್ಯಾಯಪರವಾಗಿ ನಡೆದುಕೊಳ್ಳುವುದೆಂದರೆ ಸಮಾನತೆಯಿಂದ ನಡೆದುಕೊಂಡಂತೆ ಎಂದು ಯಾರಾದರೂ ವಾದಿಸಬಹುದು - 'ಜನರನ್ನು ಒಂದೇ ರೀತಿ ನಡೆಸಿಕೊಳ್ಳುವುದು' ಹಾಗೂ 'ಅವರನ್ನು ಸಮಾನ ಗೌರವ ಹಾಗೂ ಕಾಳಜಿಯಿಂದ ನಡೆಸಿಕೊಳ್ಳುವುದು' ಎನ್ನುವುದರ ಮಧ್ಯೆ ಹೇಗೆ ಕುಖ್ಯಾತ ಅಸ್ಪಷ್ಟತೆಯಿದೆಯೋ ಹಾಗೆಯೇ 'ಸಮಾನವಾಗಿ ನಡೆಸಿಕೊಳ್ಳುವುದು' ಎನ್ನುವುದೂ ಸಹ ಅಷ್ಟೇ ಕುಖ್ಯಾತ ಅಸ್ಪಷ್ಟತೆಯನ್ನು ಹೊಂದಿದೆ. ಉದಾಹರಣೆಗೆ, ಗಂಡಸರು, ಹೆಂಗಸರು ಹಾಗೂ ಮಕ್ಕಳ ಒಂದು ಗುಂಪಿಗೆ ಆಹಾರವನ್ನು ಹಂಚುವಾಗ, ಸಮಾನವಾಗಿ ನಡೆಸಿಕೊಳ್ಳುವುದು ಎಂದರೆ ಅವರಲ್ಲಿ ಎಲ್ಲರಿಗೂ ಒಂದೇ ಪ್ರಮಾಣದಲ್ಲಿ ಪಡಿತರವನ್ನು ಕೊಡುವುದು ಎಂದಾಗಬಹುದು ಅಥವಾ ಅವರ ವಿಭಿನ್ನ ಹಸಿವು, ಅಗತ್ಯಗಳಿಗೆ ಯಾವುದು ಸೂಕ್ತವೋ ಅಷ್ಟನ್ನು ಕೊಡುವುದು ಎಂದಾಗಬಹುದು. ಅದೇ ರೀತಿಯಲ್ಲಿ, ಪರಿಣಾಮದಲ್ಲಿ ಸಮಾನತೆ ಎನ್ನುವುದಕ್ಕೂ, ಅವಕಾಶಗಳಲ್ಲಿ ಸಮಾನತೆ ಎನ್ನುವುದಕ್ಕೂ ಮಧ್ಯೆ ವ್ಯತ್ಯಾಸ ಇದೆ ಎಂಬುದನ್ನು ಮನಗಾಣಬೇಕು. ಅಂತಿಮ ಲೆಕ್ಕಾಚಾರದಲ್ಲಿ ಎಲ್ಲರಿಗೂ ತಿಳಿದಿರುವಂತಹ ವ್ಯತ್ಯಾಸಗಳನ್ನು ಕಂಡುಕೊಳ್ಳಬೇಕು ನಿಜ, ಆದರೆ ಈಗ ಸದ್ಯಕ್ಕೆ ಈ ಯಾವುದೇ ವಿಷಯಗಳ (ಸಮಾನ ಅವಕಾಶ, ಸಮಾನ ಪರಿಣಾಮ, ಸಮಾನ ಹಂಚಿಕೆ ಹಾಗೂ ಸಮಾನ ಗೌರವ) ಕುರಿತಾದ ಕಾಳಜಿ ಹಾಗೂ ಎಲ್ಲಿ ಅವರನ್ನು ಬೇರೆ ರೀತಿಯಲ್ಲಿ ಕಾಣುವುದಕ್ಕೆ ಸಕಾರಣಗಳಿರುತ್ತವೋ ಅಂತಹ ಸಂದರ್ಭಗಳನ್ನು ಹೊರತುಪಡಿಸಿ, ಜನರನ್ನು ಸಮಾನವಾಗಿ ಕಾಣಬೇಕು ಎನ್ನುವ ಇನ್ನೂ ಹೆಚ್ಚು ಮೂಲಭೂತವಾದ ಕಾಳಜಿ - ಅಂದರೆ, ಯಾವುದನ್ನು ನಾನು ನ್ಯಾಯಪರತೆಯ ತತ್ವ ಎಂದು ಪರಿಗಣಿಸುತ್ತೇನೋ - ಅವುಗಳ ಮಧ್ಯೆ ಇರುವ ವ್ಯತ್ಯಾಸವನ್ನು ಗುರುತಿಸಬೇಕು. ಇದನ್ನು ಬೇರೆ ರೀತಿಗಳಲ್ಲಿ ವ್ಯಕ್ತಪಡಿಸಬಹುದಾದರೂ, 'ನ್ಯಾಯಪರತೆ' ಎನ್ನುವುದು ಸರ್ವೇಸಾಮಾನ್ಯವಾದ ಹಾಗೂ ಅತ್ಯಂತ ಸರಳವಾದ ಪದ ಎಂದು ತೋರುತ್ತದೆ. ಈ ಅರ್ಥದಲ್ಲಿ ನ್ಯಾಯಪರತೆಯು ಸಮಾನತೆಗಿಂತ ಭಿನ್ನವಾಗಿರುತ್ತದೆ. ಸಮಾನತೆಯನ್ನು ಯಾರು ಯಾವುದೇ ರೀತಿ ವ್ಯಾಖ್ಯಾನಿಸಿದರೂ ಸಹ ಅದು ಸ್ವಲ್ಪ ಮಟ್ಟಿಗೆ ಹೆಚ್ಚು ವಾಸ್ತವಿಕ ನೆಲೆಯಲ್ಲಿ ಕೆಲಸ ಮಾಡುತ್ತದೆ. ನ್ಯಾಯಪರತೆ ಎನ್ನುವುದು ಹೆಚ್ಚು ಸಾರ್ವತ್ರಿಕ ಹಾಗೂ ಅಮೂರ್ತವಾದಂತಹ ಪರಿಕಲ್ಪನೆ; ನಾವು ನ್ಯಾಯಪರತೆಯಿಂದಿರುವ ಅವಶ್ಯಕತೆಯನ್ನು ಒಂದು ಸಲ ಒಪ್ಪಿಕೊಂಡೆವೆಂದರೆ ವಿಶಿಷ್ಟ ಸಂದರ್ಭಗಳಲ್ಲಿ ನ್ಯಾಯಪರವಾಗಿರುವುದು ಎಂದರೆ ಹೇಗೆ ಎನ್ನುವ ಚರ್ಚೆಯಲ್ಲಿ ಭಾಗಿಯಾಗತೊಡಗುತ್ತೇವೆ. ಇದು ನಮ್ಮನ್ನು ಕೆಳಹಂತದ ಪ್ರಶ್ನೆಯಾದ, ಸಮಾನವಾಗಿ ಕಾಣುವುದು ಎಂದರೆ ಏನು ಎನ್ನುವುದರತ್ತ ಗಮನಹರಿಸುವಂತೆ ಮಾಡುತ್ತದೆ. ಏಕೆಂದರೆ ಸಮಾನವಾಗಿ ಕಾಣುವುದು ಎನ್ನುವುದು ಒಂದಲ್ಲ ಒಂದು ಅರ್ಥದ(ಗಳ)ಲ್ಲಿ ಖಂಡಿತವಾಗಿಯೂ ನ್ಯಾಯಪರತೆಯ ಭಾಗವೇ ಆಗಿದೆ. ಆದರೆ ಅದಷ್ಟೇ ಅಲ್ಲ.

ನ್ಯಾಯಪರತೆಯ ಕುರಿತು ಏಕೆ ಯಾವುದೇ ನಿಜವಾದ ವಿವಾದವಿಲ್ಲ ಎನ್ನುವುದಕ್ಕೆ ಇದು ಖಂಡಿತವಾಗಿಯೂ ಭಾಗಶಃ ಕಾರಣವಾಗಿದೆ: ಏಕೆಂದರೆ ಇದು ಸರ್ವೇಸಾಮಾನ್ಯವಾದಂಥದ್ದು ಹಾಗೂ ಅಮೂರ್ತವಾದದ್ದರಿಂದ ನಾವೆಲ್ಲ ಅದನ್ನು ಒಪ್ಪಿಕೊಳ್ಳಬಹುದು. ಆದರೆ ಆಹಾರ ಹಂಚಿಕೆಯ ಕುರಿತು ನಾವು ಹೆಚ್ಚು ನಿರ್ದಿಷ್ಟವಾಗಿ ಹಾಗೂ ವಸ್ತುನಿಷ್ಠವಾಗಿ

ಆಲೋಚನೆ ಮಾಡುತ್ತಿದ್ದಂತೆ, ನ್ಯಾಯಪರತೆಯನ್ನು ಅಷ್ಟು ಸುಲಭವಾಗಿ ಕಾಪಾಡಿಕೊಳ್ಳಲು ಸಾಧ್ಯವಾಗುವುದಿಲ್ಲ. ಸಾಮಾನ್ಯವಾಗಿ 'ನ್ಯಾಯಪರತೆ'ಯನ್ನು ನೈತಿಕ ತತ್ವವನ್ನಾಗಿ ಸರಿಯಾಗಿಯೇ ಅಂಗೀಕರಿಸಲಾಗುತ್ತದೆ ಏಕೆಂದರೆ ನ್ಯಾಯಪರತೆ ಎಂದರೆ ಒಳ್ಳೆಯದು ಎಂತಲೂ, 'ಅನ್ಯಾಯಯುತವಾಗಿರುವುದು' ಕೆಟ್ಟದ್ದು ಎಂತಲೂ ವ್ಯಾಖ್ಯಾನಿಸಲಾಗುತ್ತದೆ. ಹೇಗೆ ಒಳ್ಳೆಯತನವನ್ನು ಕೆಟ್ಟದ್ದು ಎಂದು ಪರಿಗಣಿಸಲಾಗುವುದಿಲ್ಲವೋ ಅದಕ್ಕಿಂತಲೂ ಹೆಚ್ಚಾಗಿ ನ್ಯಾಯಪರತೆಯನ್ನು ಕೆಟ್ಟದ್ದು ಎಂದು ಪರಿಗಣಿಸಲಾಗುವುದಿಲ್ಲ; ಅವೆರಡೂ ಮೂಲಭೂತವಾದ ಪ್ರಮಾಣಕ (normative) ಪದಗಳು. ಇದೇನೋ ನಿಜವೇ. ಆದರೆ ನೈತಿಕತೆಯ ಬಗ್ಗೆ ನಮಗೆ ತಿಳುವಳಿಕೆ ಇದೆ ಎಂದು ಘೋಷಿಸಿಕೊಳ್ಳಬೇಕೆಂದರೆ, ಕೇವಲ ನ್ಯಾಯಪರತೆಯು ಒಳ್ಳೆಯದು ಎಂದು ಸ್ಥಿರೀಕರಿಸುವುದಕ್ಕಿಂತ ಹೆಚ್ಚಿನದನ್ನು ಮಾಡಬೇಕಾಗುತ್ತದೆ. ಅದೇನೇ ಇರಲಿ, ನ್ಯಾಯಪರತೆಯು ಎಲ್ಲರನ್ನೂ ಸಮಾನವಾಗಿ ಪರಿಗಣನೆಗೆ ತೆಗೆದುಕೊಳ್ಳಬೇಕು. ಅಂದರೆ ಎಲ್ಲರನ್ನೂ ಸಮಾನವಾಗಿ ಕಾಣಬೇಕು ಎನ್ನುವ ಅರ್ಥದಲ್ಲಿ, ಅಂದರೆ ಹಾಗೆ ಮಾಡದಿರಲು ಸಕಾರಣಗಳು ಇರುವಂತಹ ಸಂದರ್ಭಗಳನ್ನು ಹೊರತುಪಡಿಸಿ ನೈತಿಕತೆಯನ್ನು ವ್ಯಾಖ್ಯಾನಿಸುವಲ್ಲಿ ಅದು ನಿರಾಕರಿಸಲಾಗದಂತಹ ಒಂದು ತತ್ವ.

'ನ್ಯಾಯ' ಹಾಗೂ 'ನಿಷ್ಪಕ್ಷಪಾತತೆ'ಯ ಕುರಿತು ಇಲ್ಲಿ ಹೆಚ್ಚಿಗೆ ಏನನ್ನೂ ಹೇಳುವ ಅವಶ್ಯಕತೆಯಿಲ್ಲ. 'ನ್ಯಾಯ' ಎನ್ನುವ ಪದದ ಅರ್ಥವನ್ನು ಅದು ಕಾಲಾಂತರಗಳಲ್ಲಿ ಹಾಗೂ ವಿವಿಧ ಸಂದರ್ಭಗಳು ಹಾಗೂ ಸ್ಥಳಗಳಲ್ಲಿ ಒಳಪಟ್ಟಿರುವಂತಹ ಬದಲಾವಣೆಗಳಿಂದಾಗಿ, ಕಾನೂನಿನ ಅರ್ಥಕ್ಕೆ ಸೀಮಿತಗೊಳಿಸುವುದೇ ಪ್ರಾಯಶಃ ಒಳ್ಳೆಯದು. ಕೆಲವರು 'ನ್ಯಾಯ'ವನ್ನು ಹೆಚ್ಚು ಕಡಿಮೆ 'ನೈತಿಕತೆ'ಗೆ ಸಮಾನಾರ್ಥಕ ಪದವೆಂದೂ, ಇನ್ನೂ ಕೆಲವರು 'ಸಮಾನತೆ'ಗೆ ಸಮಾನ ಪದವೆಂದೂ ಇನ್ನೂ ಕೆಲವರು 'ನ್ಯಾಯಪರತೆ'ಗೇ ಸಮಾನವಾದದ್ದೆಂದೂ ಬಳಸುತ್ತಾರೆ. ಸ್ಪಷ್ಟವಾಗಿ ಹೇಳಬೇಕೆಂದರೆ ನ್ಯಾಯ ಅಥವಾ ಆ ಪದದ ಅರ್ಥದ ಕುರಿತು ಆಳವಾಗಿ ಬೇರೂರಿರುವಂತಹ ಯಾವುದೇ ನಿಲುವಿನ ಕುರಿತು ನನ್ನ ಯಾವುದೇ ತಕರಾರಿಲ್ಲ; ಆದರೆ ಸ್ಪಷ್ಟತೆಯ ಕಾರಣಕ್ಕೋಸ್ಕರ, ನಾವು ಅದನ್ನು ಬಳಸದೆ ಇದ್ದರೆ ಒಳ್ಳೆಯದು ಎಂದು ನನ್ನ ಸಲಹೆ. ಬದಲಿಗೆ 'ನಿಷ್ಪಕ್ಷಪಾತತೆ' ಪದವು 'ನ್ಯಾಯಪರತೆ'ಗೆ ಸಮಾನಾರ್ಥಕ ಪದವೆಂದು ಹೇಳಬಹುದು. ಜನಗಳನ್ನು ಕೆಲವು ನಿಶ್ಚಿತ ನಿಯಮಗಳು ಅಥವಾ ರೂಢಿಗಳಿಗೆ ಅನುಗುಣವಾಗಿ ನಡೆಸಿಕೊಳ್ಳುವುದು ಎನ್ನುವ ಅರ್ಥದಲ್ಲಿ ನ್ಯಾಯಪರತೆ ಹಾಗೂ ನಿಷ್ಪಕ್ಷಪಾತತೆ ಎರಡೂ ಸಹ ಸಮಾನತೆಗಿಂತ ಭಿನ್ನವಾಗಿವೆ. ಒಂದು ಗುಂಪಿನ ಜನರನ್ನೂ ಸಮಾನವಾಗಿ ಆದರೆ ಅನ್ಯಾಯಯುತವಾಗಿ ನಡೆಸಿಕೊಳ್ಳಬಹುದು, ಅಂದರೆ, ಅವರ ಹಕ್ಕುಗಳನ್ನೂ ಸಮಾನವಾಗಿ ನಿರ್ಲಕ್ಷಿಸುತ್ತೇವೆ ಎನ್ನುವ ಅರ್ಥದಲ್ಲಿ ನಡೆಸಿಕೊಳ್ಳಬಹುದು. ಸಾಧಾರಣ ಉದಾಹರಣೆಯ ಮಟ್ಟದಲ್ಲಿ ಹೇಳಬೇಕೆಂದರೆ, ಯಾವುದೇ ನಿಯಮಗಳನ್ನು ಉಲ್ಲಂಘಿಸಿರದಿದ್ದರೂ ಆಟಗಾರರ ಮೇಲೆ ತೀರ್ಪುಗಾರರು ತಪ್ಪನ್ನು ಹೊರಿಸುವುದು ಅನ್ಯಾಯಯುತವಾದದು. ಅವರು ಎಲ್ಲ ಆಟಗಾರರನ್ನು ಒಂದೇ ರೀತಿ ಅಥವಾ ಸಮಾನವಾಗಿ ನಡೆಸಿಕೊಂಡರೂ ಸಹ ಅದು ಅನ್ಯಾಯಯುತವಾದ ನಡವಳಿಕೆಯೇ ಆಗಿರುತ್ತದೆ.

ಈ ಕೊನೆಯ ಪರಿಗಣನೆಯು ನಮ್ಮನ್ನು ಎರಡನೆಯ ತತ್ವಕ್ಕೆ ಕೊಂಡೊಯ್ಯುತ್ತದೆ. ಅದು ಯಾವುದು ನೈತಿಕ ಸಿದ್ಧಾಂತವೆಂದು ಕರೆಸಿಕೊಳ್ಳಬಹುದೋ ಅದರ ಅನಿವಾರ್ಯ ಅಂಗವಾಗಿರುತ್ತದೆ. ಇದು ಯಾವುದೇ ತತ್ವಜ್ಞಾನಿಯೂ ಒಪ್ಪಿಕೊಳ್ಳುವಂತಹ ಇನ್ನೊಂದು ತತ್ವ ಎನ್ನುವುದು ನನ್ನ ನಿಲುವು: ಅಂದರೆ ವ್ಯಕ್ತಿಗಳನ್ನು ಅವರು ಹೇಗಿದ್ದಾರೋ

ಹಾಗೆಯೇ ಗೌರವಿಸುವ ತತ್ವ. ವ್ಯಕ್ತಿಗಳನ್ನು ಗೌರವಿಸುವುದು ಅಪೇಕ್ಷಣೀಯವಾದದ್ದು ಎನ್ನುವ ಕಾರಣಕ್ಕಾಗಿಯೇ ಗೌರವಿಸುವುದು. ಇದು ನ್ಯಾಯಪರತೆಯ ತತ್ವದೊಂದಿಗೆ ಅತ್ಯಂತ ನಿಕಟವಾದ ಸಂಬಂಧ ಹೊಂದಿದ್ದರೂ ಸಹ ವಿಶಿಷ್ಟವಾದದ್ದು. ಅದೆಂದರೆ, ನ್ಯಾಯಪರತೆಯು ಎಲ್ಲರನ್ನೂ ಸಮಾನವಾಗಿ ಕಾಣಬೇಕು, ಎಲ್ಲಿ ಸುಸಂಬದ್ಧ ವ್ಯತ್ಯಾಸಗಳಿರುತ್ತವೆಯೋ ಅಂತಹ ಸಂದರ್ಭಗಳನ್ನು ಹೊರತುಪಡಿಸಿ, ಎನ್ನುವ ನಿಲುವನ್ನು ತಾಳಿದರೆ, ವ್ಯಕ್ತಿಗಳನ್ನು ಗೌರವಿಸಬೇಕು ಎನ್ನುವ ತತ್ವವು ('ವ್ಯಕ್ತಿಗಳಿಗೆ ಅದು ಅಪೇಕ್ಷಾರ್ಹ ಎನ್ನುವ ಕಾರಣಕ್ಕಾಗಿಯೇ ಮನ್ನಣೆ ನೀಡಿ ನಡೆಸಿಕೊಳ್ಳುವುದು' ಎನ್ನುವುದರ ಸಂಕ್ಷಿಪ್ತ ಅಭಿವ್ಯಕ್ತಿ) ವ್ಯಕ್ತಿಗಳನ್ನು ಸಾಮಾನ್ಯವಾಗಿ ಸಮಾನವಾಗಿ ನಡೆಸಿಕೊಳ್ಳುವುದು ಎಂದಲ್ಲ, ಬದಲಿಗೆ ಹೆಚ್ಚು ನಿರ್ದಿಷ್ಟವಾಗಿ ಅವರೆಲ್ಲರನ್ನೂ ಸಮಾನವಾಗಿ ಸ್ವತಂತ್ರ ವ್ಯಕ್ತಿಗಳೆಂದು ನಡೆಸಿಕೊಳ್ಳಬೇಕೇ ಹೊರತು, ಅವರನ್ನು ವಸ್ತುಗಳೇನೋ ಎಂಬಂತೆ ಅಥವಾ ಬೇರೆಯವರ ಅನುಕೂಲಕ್ಕೆ ಸಾಧನಗಳೇನೋ ಎಂಬಂತೆ ನಡೆಸಿಕೊಳ್ಳುವುದಲ್ಲ.

ಕೆಲವು ಓದುಗರು, ಎಲ್ಲ ಮನುಷ್ಯರನ್ನೂ ಅದು ಅಪೇಕ್ಷಣೀಯ ಎನ್ನುವ ಕಾರಣಕ್ಕೆ ಗೌರವಿಸಬೇಕು, ಯಾರದೋ ಉದ್ದೇಶ ಸಾಧನೆಗಾಗಲೀ, ಸಂತೋಷಕ್ಕಾಗಲೀ ಸಾಧನವಾಗಿ ಬಳಸಬಾರದು ಎನ್ನುವ ಭಾವನೆಗಳನ್ನು ಹಂಚಿಕೊಳ್ಳುತ್ತಲೇ ಇದು ಮೆಲ್ನೋಟಕ್ಕೇ ಕಂಡುಬರುವಂತೆ ಸಾರ್ವತ್ರಿಕವಾಗಿ ಒಪ್ಪಿಗೆ ಪಡೆದಿರುವಂತಹ ತತ್ವ ಅಲ್ಲ ಎಂದು ಸಕಾರಣವಾಗಿ ವಾದಿಸಬಹುದು: ವಿವಿಧ ವಿಭಾಗಗಳಿಗೆ ಸೇರಿದ ಜನರು (ಉದಾ: ಯಹೂದಿಗಳು, ಅಲೆಮಾರಿಗಳು, ಸಲಿಂಗಕಾಮಿಗಳು) ಮನುಷ್ಯರೇ ಅಲ್ಲ ಹಾಗೂ ಅವರನ್ನು ಹಾಗೆ ಕಾಣುವುದು ಅಪೇಕ್ಷಣೀಯವೂ ಅಲ್ಲ ಎಂಬ ನಾಝಿಗಳ ಸ್ಪಷ್ಟವಾಗಿ ಕಂಡುಬರುವ ನಂಬಿಕೆಯಿಂದ ಮೊದಲ್ಗೊಂಡು, ಕೆಲವು ವ್ಯಕ್ತಿಗಳು ಹಾಗೂ ಗುಂಪುಗಳು ಸ್ವೀಕಾರಾರ್ಹರಲ್ಲವೆಂಬ ಅಷ್ಟು ಸ್ಪಷ್ಟವಾಗಿಲ್ಲದಿದ್ದರೂ ವ್ಯಾಪಕವಾಗಿರುವಂತಹ ಧೋರಣೆಯವರೆಗೆ, (ಉದಾ: ಅಲೆಮಾರಿಗಳು, ಬೀದಿಯಲ್ಲಿ ವಾಸಿಸುವವರು, ಮಾದಕವಸ್ತು ವ್ಯಸನಿಗಳು) ಇದು ಪ್ರತಿಯೊಬ್ಬರೂ ಒಪ್ಪಿಕೊಳ್ಳುವಂತಹ ತತ್ವ ಅಲ್ಲ ಎನ್ನುವುದಕ್ಕೆ ಖಂಡಿತವಾಗಿಯೂ ಪುರಾವೆ ಇದೆ.

ಸಾಮಾನ್ಯವಾಗಿ ಹೇಳಬೇಕೆಂದರೆ, ಯಾವುದೇ ಒಬ್ಬ ವ್ಯಕ್ತಿ ಅಥವಾ ಗುಂಪು ಒಂದು ವಿಷಯವನ್ನು ಅಲ್ಲಗಳೆಯುತ್ತಾರೆ ಎನ್ನುವುದು ಅದರ ಅಸತ್ಯತೆಯನ್ನು ಸ್ಥಾಪಿಸುವುದಕ್ಕೆ ಸಾಕಾಗುವುದಿಲ್ಲ ಅಥವಾ ಅವರ ಪ್ರತಿಪಾದನೆ ಸರಿಯೇ ಎಂಬ ಪ್ರಶ್ನೆಗೆ ಸಹ ನೇರವಾಗಿ ಸಂಬಂಧಿಸಿದ್ದೋ ಅಲ್ಲವೋ ಎನ್ನುವುದಕ್ಕೂ ಸಾಕಾಗುವುದಿಲ್ಲ. ಕೆಲವರು ಭೂಮಿ ಚಪ್ಪಟೆಯಾಗಿದೆ ಎಂದು ನಂಬುತ್ತಾರೆ ಎನ್ನುವುದು ವಾಸ್ತವವು ಹಾಗಲ್ಲ ಎನ್ನುವುದರ ಮೇಲೆ ಯಾವುದೇ ಸಂಬಂಧ ಹೊಂದಿಲ್ಲ. ನೈತಿಕತೆಯ ಕುರಿತು ಯಾರೂ ಅಲ್ಲಗಳೆಯಲಾಗದ ಕೆಲವು ಮೂಲಭೂತ ಪ್ರತಿಪಾದನೆಗಳಿವೆ ಎನ್ನುವುದು ನನ್ನ ವಾದಸರಣಿಯ ಒಂದು ಭಾಗ ಎನ್ನುವುದೇನೋ ನಿಜ. ಆದರೆ ಈ ಸಂದರ್ಭದಲ್ಲಿ, ಅವರಿಗೆ ವಿಷಯ ಸಂಪೂರ್ಣವಾಗಿ ಅರ್ಥವಾಗಿದ್ದರೆ, ಅವರು ಅದನ್ನು ಅಲ್ಲಗಳೆಯುತ್ತಾರೆ ಎನ್ನುವುದು ಸ್ಪಷ್ಟವಾಗಿಲ್ಲ. ಎರಡನೆಯದಾಗಿ, ಈ ನಿಲುವನ್ನು ಎಲ್ಲ ಮನುಷ್ಯರೂ ಹಂಚಿಕೊಳ್ಳಲೇಬೇಕು ಎಂದೇನಿಲ್ಲ. ಆದರೆ ಐತಿಹಾಸಿಕವಾಗಿ ಎಲ್ಲ ತತ್ವಜ್ಞಾನಿಗಳೂ ಸ್ಪಷ್ಟವಾಗಿಯೇ ಇದನ್ನು ಒಪ್ಪಿಕೊಂಡಿದ್ದಾರೆ ಅಥವಾ ಇದನ್ನು ಪರಿಗಣಿಸಬೇಕು ಎಂಬ ಒತ್ತಾಯ ಬಂದಿದ್ದರೆ ಒಪ್ಪಿಕೊಳ್ಳುತ್ತಿದ್ದರೇನೋ. ಮೂರನೆಯದಾಗಿ, ಪರ್ಯಾಲೋಚನೆಯ ನಂತರ, ಓದುಗರು ಈ ನಿಲುವನ್ನು ಒಪ್ಪಿಕೊಳ್ಳುತ್ತಾರೆಯೆ ಎನ್ನುವುದು ನಿಜವಾದ ಪ್ರಶ್ನೆಯಾಗಿದೆ. ಬೇರೆ ಮಾತುಗಳಲ್ಲಿ ಹೇಳಬೇಕೆಂದರೆ, ಓದುಗರಾದ

ನೀವು, ಪರ್ಯಾಲೋಚನೆಯ ನಂತರ, ನೈತಿಕ ಪ್ರಪಂಚ ಎಂದರೆ ಏನು ಎಂದು ತಿಳಿದುಕೊಂಡಿದ್ದೀರೊ ಅದರಲ್ಲಿ ಯಾವುದೇ ವ್ಯಕ್ತಿಯನ್ನಾಗಲೀ, ಗುಂಪನ್ನಾಗಲೀ ಕೇವಲ ಬೇರೆಯವರ ಉಪಯೋಗಕ್ಕೆ ಬಳಸಬಹುದಾದ ಸಾಧನ ಎಂದು ಭಾವಿಸುವುದಿಲ್ಲ ಎಂದು ಒಪ್ಪಿಕೊಳ್ಳುತ್ತೀರಾ ಎನ್ನುವುದೇ ಮುಖ್ಯ ಪ್ರಶ್ನೆ. ಗುಲಾಮರ ಒಡೆಯರೂ ಸಹ, ಕೆಲವು ವ್ಯಕ್ತಿಗಳು ಉಳಿದವರ ಅನುಕೂಲಕ್ಕೆ ಕೇವಲ ಸಾಧನಗಳಾಗಿರುತ್ತಾರೆ ಎಂದು ಸುಮ್ಮನೆ ಒತ್ತಿ ಹೇಳದೆ ಕೆಲವು ವಾದಗಳನ್ನು ಮುಂದೊಡ್ಡಿ ತಮ್ಮ ನಡವಳಿಕೆಯನ್ನು ಸಮರ್ಥಿಸಿಕೊಳ್ಳಲು ಪ್ರಯತ್ನಿಸಿದ್ದರು. ನಾಝಿಗಳೂ ಸಹ ಯಹೂದಿಗಳ ವಿರುದ್ಧ ತಾವು ಕೈಗೊಂಡ ಕ್ರಮಗಳನ್ನು ಸಮರ್ಥಿಸಿಕೊಳ್ಳಲು ಕಾರಣಗಳನ್ನು ಶೋಧಿಸುವ ತೊಂದರೆಯನ್ನು ತೆಗೆದುಕೊಳ್ಳಬೇಕಾಯಿತು. ಬೇಕಿದ್ದರೆ ನಾವು ಯಹೂದಿಗಳನ್ನು ನಮ್ಮ ಉದ್ದೇಶ ಸಾಧನೆಗೋಸ್ಕರ ಸಾಧನಗಳನ್ನಾಗಿ ಬಳಸಿಕೊಳ್ಳಬಹುದು ಎನ್ನುವುದು ಸ್ವಯಂಸಿದ್ಧವಾಗಿದೆ ಎಂದು ಹೇಳಿ ಸುಮ್ಮನಾಗಲಿಲ್ಲ.

ನಾವು ಕೆಲವು ಸಲ, ನಮಗೆ ಇಷ್ಟವಿರಲಿ ಬಿಡಲಿ, ನಾವು ಒಪ್ಪಿಕೊಳ್ಳಲಿ ಬಿಡಲಿ, ಜನರ ಬಗ್ಗೆ ಪ್ರತಿಕೂಲ ಭಾವನೆಯನ್ನು ಹೊಂದಿರುತ್ತೇವೆ ಅಥವಾ ಕೆಲವು ಕಾರಣಗಳಿಂದಾಗಿ ಆ ಜನರು ತಮ್ಮ ಹಕ್ಕುಗಳನ್ನು ಕಳೆದುಕೊಂಡಿದ್ದಾರೆ ಎಂದು ವಾದಿಸುತ್ತೇವೆ ಎನ್ನುವ ಕಾರಣದಿಂದ ವಿಷಯವು ಗೊಂದಲಕ್ಕೊಳಗಾಗುವುದಕ್ಕೆ ಬಿಡಬಾರದು. ಒಬ್ಬ ವ್ಯಕ್ತಿ ಏನಾದರೂ ಸರಣಿ ಅತ್ಯಾಚಾರ ಎಸಗಿದ್ದರೆ ಆಗ ಖಂಡಿತವಾಗಿಯೂ ನಾವು ಅವನ ಬಗ್ಗೆ ಅಸಹ್ಯಪಟ್ಟುಕೊಳ್ಳಬಹುದು ಹಾಗೂ ಅವನನ್ನು ಬೇರೆಯವರಿಗಿಂತ ಭಿನ್ನವಾಗಿ ಕಾಣಬಹುದು; ಅದು ನ್ಯಾಯಪರತೆಯಿಂದ ನಡೆದುಕೊಳ್ಳುವುದು ಹಾಗೂ ಬೇರೆಯವರನ್ನು ಗೌರವದಿಂದ ಕಾಣುವುದು ಎಂಬ ತತ್ವಕ್ಕೆ ಸಂಪೂರ್ಣವಾಗಿ ಅನುಗುಣವಾಗಿರುವಂಥದ್ದೇ ಆಗಿದೆ. ಈ ತತ್ವ ನಮ್ಮಿಂದ ಏನನ್ನು ಅಪೇಕ್ಷಿಸುತ್ತದೆ ಎಂದರೆ, ಯಾವುದೇ ವ್ಯಕ್ತಿ ಯಾವುದೋ ಒಂದು ರೀತಿಯಲ್ಲಿ ಅಪರಾಧ ಎಸಗಿದ್ದಾರೆ ಎಂದು ಬೆಳಕಿಗೆ ಬರುವ ಮೊದಲು ಅವರನ್ನು ಅವರಿರುವ ಹಾಗೆಯೇ ಒಪ್ಪಿಕೊಳ್ಳಬೇಕಾದುದು ಅಪೇಕ್ಷಣೀಯ ಎನ್ನುವ ಸಮಾನ ಹಕ್ಕನ್ನು ಅನುಲ್ಲಂಘನೀಯ ಎಂದು ಭಾವಿಸಬೇಕು, ಹಾಗೂ ಅವರು ಯಾವುದೇ ರೀತಿಯ ದಂಡಕ್ಕೆ ಅಥವಾ ಶಿಕ್ಷೆಗೆ ಅರ್ಹರಾದಾಗಲೂ ಸಹ ಅವರು ಕೇವಲ ನಮ್ಮ ಉದ್ದೇಶ ಸಾಧನೆಗೆ ಸಾಧನವಲ್ಲ, ನಮ್ಮ ಉಪಯೋಗಕ್ಕೆ ಬಳಸಬಹುದಾದ ಸ್ವತ್ತಲ್ಲ ಎನ್ನುವುದನ್ನು ಗುರುತಿಸಬೇಕು.

ಯಾವುದು ನೈತಿಕ ಸಿದ್ಧಾಂತ ಎಂದು ಕರೆಸಿಕೊಳ್ಳುತ್ತದೋ ಅದರ ಮೂರನೆಯ ಅನಿವಾರ್ಯವಾದ ಭಾಗವೆಂದರೆ ಅದು ಸ್ವಾತಂತ್ರ್ಯದ ತತ್ವಕ್ಕೆ ಸಂಬಂಧಿಸಿರುವಂಥದ್ದು. ನೈತಿಕವಾಗಿ ನಡೆದುಕೊಳ್ಳುವುದು ಎಂದರೆ ಕೇವಲ ಕೆಲವು ಉಪದೇಶಗಳನ್ನು ಅನುಸರಿಸುವುದು ಎಂದು ಯೋಚನೆಯೇ ಮಾಡದೆ ಭಾವಿಸುವಂತಹ ವ್ಯಕ್ತಿಗಳಿದ್ದಾರೆ. ಆದರೆ, ಒತ್ತಿ ಕೇಳಿದರೆ ಈ ಉಪದೇಶಗಳನ್ನು ತಮ್ಮ ಸ್ವಂತ ಆಯ್ಕೆಯಿಂದ ಮುಕ್ತವಾಗಿ ಅನುಸರಿಸುವುದಕ್ಕೂ, ಒತ್ತಡಕ್ಕೆ ಒಳಗಾಗಿ ಅಥವಾ ಹೆದರಿಕೆಯಿಂದ ಅವನ್ನು ಅನುಸರಿಸುವುದಕ್ಕೂ ವ್ಯತ್ಯಾಸ ಇದೆ ಎನ್ನುವುದನ್ನು ಅವರೂ ಸಹ ಖಂಡಿತವಾಗಿಯೂ ಒಪ್ಪಿಕೊಳ್ಳುತ್ತಾರೆ. ನೈತಿಕವಾಗಿ ನಡೆದುಕೊಳ್ಳುವುದೆಂದರೆ (ನೀವು ಸ್ವೀಕರಿಸಿದ ನಿರ್ದಿಷ್ಟ ನೈತಿಕ ಸಂಹಿತೆಗಳನ್ನು ಲೆಕ್ಕಿಸದೆ) ಮುಕ್ತವಾಗಿ ನಡೆದುಕೊಳ್ಳುವುದು ಎಂಬ ಮೂಲಭೂತ ಅಂಶದ ಪರಿಗಣನೆಯೆನಿಸಿದೆ. ಏಕೆಂದರೆ ಅದು ತಮ್ಮ ಕರ್ತವ್ಯ ಎಂದು ಭಾವಿಸಿ ಹಾಗೆ ನಡೆದುಕೊಳ್ಳುವುದಲ್ಲದೆ ಕೇವಲ ಯಾವುದೋ ಪುರಸ್ಕಾರದ ನಿರೀಕ್ಷೆಯಿಂದ ಅಥವಾ ಯಾವುದೋ ದುಃಖದಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಹಾಗೆ ನಡೆದುಕೊಳ್ಳುವುದಲ್ಲ. ಸ್ವರ್ಗದಲ್ಲಿ ತಕ್ಕ ಪ್ರತಿಫಲ ಸಿಗುವುದು ಎಂದು ನಂಬುವವರಿಗೆ ಹಾಗೂ ಆ ಪ್ರತಿಫಲದ ಆಸೆಯಿಂದಾಗಿ ಒಂದು ಮಟ್ಟಿಗೆ

ಪ್ರೇರಿತರಾಗಿರಾಗಿರುವರೆಂದು ಹೇಳಲ್ಪಟ್ಟವರಿಗೆ, ತಮ್ಮ ನಂಬಿಕೆಗೆ ಅನುಗುಣವಾಗಿಯೇ ಕೇವಲ ಅಂತಹ ಪ್ರತಿಫಲದ ಆಸೆಯಿಂದ ಹಾಗೆ ನಡೆದುಕೊಳ್ಳುವುದು ಸಾಕಾಗುವುದಿಲ್ಲ ಎಂದು ಚೆನ್ನಾಗಿ ತಿಳಿದಿರುತ್ತದೆ: ಆ ರೀತಿ ನಡೆದುಕೊಳ್ಳುವುದು ಒಳ್ಳೆಯದು ಎನ್ನುವ ಕಾರಣಕ್ಕಾಗಿಯೇ ಹಾಗೆ ನಡೆದುಕೊಳ್ಳುವುದನ್ನು ಮುಕ್ತವಾಗಿ ಆರಿಸಿಕೊಳ್ಳಬೇಕು.

ಈ ಹಂತದಲ್ಲಿ ನಾವು ಸ್ವಾತಂತ್ರ್ಯದ ಕುರಿತಾದ ಯಾವುದೇ ನಿರ್ದಿಷ್ಟ ಪ್ರತಿಪಾದನೆಗೂ ಬದ್ಧರಾಗಬೇಕಿಲ್ಲ. ವಾಕ್ ಸ್ವಾತಂತ್ರ್ಯವು ನಿರಂಕುಶವಾದದ್ದೇ, ಉದಾಹರಣೆಗೆ, ಯಾವುದೇ ಒಂದು ನಿರ್ದಿಷ್ಟ ಸಂದರ್ಭದಲ್ಲಿ ನಿಂದನೆ ಮಾಡಲು ಸ್ವಾತಂತ್ರ್ಯ ಇರಬೇಕೇ, ಆರ್ಥಿಕ ಗುಲಾಮಗಿರಿ ಎನ್ನುವುದು ಇದೆಯೇ, ಅದನ್ನು ಸಮರ್ಥಿಸಿಕೊಳ್ಳಬಹುದೇ ಮತ್ತು ನಿಮ್ಮ ಸ್ವಾತಂತ್ರ್ಯದೊಂದಿಗೆ ನಮ್ಮ ಸ್ವಾತಂತ್ರ್ಯವನ್ನು ಸಮನ್ವಯಗೊಳಿಸಿಕೊಳ್ಳುವುದು ಹೇಗೆ ಎನ್ನುವುದೆಲ್ಲವೂ ಅಂತಿಮವಾಗಿ ನೈತಿಕ ತತ್ವಜ್ಞಾನವು ಗ್ರಹಿಸಬೇಕಾದ ನಿರ್ಣಾಯಕವಾದ ಪ್ರಶ್ನೆಗಳು. ಈ ಹಂತದಲ್ಲಿ ನೈತಿಕತೆಯನ್ನು ನಿರಂಕುಶ ವಾಕ್ ಸ್ವಾತಂತ್ರ್ಯ ಎನ್ನುವ ಅರ್ಥದಲ್ಲಿ ವ್ಯಾಖ್ಯಾನಿಸಲು ಸಾಧ್ಯವಿಲ್ಲ. ಏಕೆಂದರೆ ಹಾಗೆ ಮಾಡಿದಾಗ ವಿವಾದಾತ್ಮಕ ಪ್ರಶ್ನೆಯೊಂದನ್ನು ಆಹ್ವಾನಿಸಿದಂತಾಗುತ್ತದೆ. ಆದರೆ ಎಲ್ಲಿ ನೈತಿಕತೆಯಿರುತ್ತದೋ ಅಲ್ಲಿ ಸ್ವಾತಂತ್ರ್ಯವಿರಲೇಬೇಕು ಎಂದು ಹೇಳಿದಾಗ ಯಾವುದೇ ಪ್ರಶ್ನೆಯೂ ಉದ್ಭವಿಸುವುದಿಲ್ಲ. ನೈತಿಕ ನಡವಳಿಕೆಯ ಅರ್ಥದ ಬಗ್ಗೆ ಅದು ಒಂದು ಮುಖ್ಯವಾದ ಅಂಶವನ್ನು ಎತ್ತುತ್ತದೆ, ಅಂದರೆ ಬೇರೆಲ್ಲ ವಿಷಯಗಳೊಂದಿಗೆ ಅದು ಮುಕ್ತವಾಗಿ ಆರಿಸಿಕೊಂಡಿರುವ ನಡವಳಿಕೆ. ಏಕೆಂದರೆ ಅದನ್ನು ಅನುಸರಿಸುವವರು ಅದನ್ನು ನೈತಿಕವಾಗಿ ತಮ್ಮ ಹೊಣೆಯೆಂದು ಭಾವಿಸಿ ಅನುಸರಿಸುತ್ತಾರೆ.

ಆದ್ದರಿಂದ ನೈತಿಕತೆಯ ಪ್ರಪಂಚವು ಸ್ವಾತಂತ್ರಕ್ಕೆ ಬೆಲೆ ಕೊಡುವ ಪ್ರಪಂಚ. ಎಂದರೆ ಅದರ ಅರ್ಥ ಏನು ಬೇಕಾದರೂ ಮಾಡುವ ಸ್ವಾತಂತ್ರ್ಯ ಅಥವಾ ಎಲ್ಲದರಿಂದಲೂ ಸ್ವಾತಂತ್ರ್ಯ ಎಂದು ಖಂಡಿತಾ ಅಲ್ಲ. ವಾಸ್ತವದಲ್ಲಿ ನೋಡಿದರೆ, ನಾವು ಈಗಾಗಲೇ ಗಮನಿಸಿರುವಂತೆ, ಸ್ವಾತಂತ್ರ್ಯಗಳು ಅನೇಕ ಬಾರಿ ಘರ್ಷಣೆಗೆ ಇಳಿಯುತ್ತವೆ. ಆದ್ದರಿಂದ ನಾವೆಲ್ಲರೂ ಏನನ್ನು ಬೇಕಾದರೂ ಮಾಡಲು ಸ್ವತಂತ್ರರಾಗಿರಬೇಕು ಎನ್ನುವುದನ್ನು ಊಹಿಸಿಕೊಳ್ಳುವುದೂ ಸಾಧ್ಯವಿಲ್ಲ. ಹಳೆಯ ನಾಣ್ಣುಡಿಯೊಂದರ ಪ್ರಕಾರ 'ಆಗಲೇ ಬೇಕು ಎಂಬುದರ ಅರ್ಥ ಆಗಬಹುದು'; ವಾಸ್ತವದಲ್ಲಿ ನಾವೆಲ್ಲರೂ ಸಂಪೂರ್ಣವಾಗಿ ನಮಗೆ ಹೇಗೆ ಬೇಕೋ ಹಾಗೆ ಮಾಡಲು ಸ್ವತಂತ್ರರಲ್ಲ, ಏಕೆಂದರೆ ನಮ್ಮ ಮುಕ್ತ ಆಯ್ಕೆಗಳು ಕೆಲವು ಸಲ ಘರ್ಷಣೆಗೊಳಗಾಗುತ್ತವೆ ಎಂದಾದಲ್ಲಿ, ನಮಗೆ ಬಯಸಿದ್ದು ಆಗಲೇಬೇಕು ಎನ್ನುವುದಕ್ಕೆ ಯಾವುದೇ ಅರ್ಥವಿರುವುದಿಲ್ಲ. ಆದ್ದರಿಂದ ನೈತಿಕತೆಯನ್ನು ಯಾವುದೇ ನಿರ್ದಿಷ್ಟ ಸ್ವಾತಂತ್ರ್ಯದ ನಿಟ್ಟಿನಲ್ಲಿ ವ್ಯಾಖ್ಯಾನಿಸಬಾರದು, (ಮುಂದೆ ನಾವು ಮತ್ತಷ್ಟು ವಾದಗಳನ್ನು ಹೂಡಿ ಕೆಲವನ್ನು ಸ್ಥಾಪಿಸಬಹುದಾದರೂ ಸಹ) ಬದಲಿಗೆ ಅದನ್ನು, ಸ್ವಾತಂತ್ರ್ಯದ ತತ್ವಕ್ಕೆ ಮನ್ನಣೆ ಕೊಡುವುದು ಎಂದು ಭಾಗಶಃ ವ್ಯಾಖ್ಯಾನಿಸಬಹುದು. ಉದಾಹರಣೆಗೆ ಸ್ವಾತಂತ್ರ್ಯವು ನೈತಿಕ ಪರಿಗಣನೆಯ ವಿಷಯ, ಆದರೆ ಸಂಪತ್ತು ಹಾಗೂ ಲೈಂಗಿಕತೆಗಳು ಹಾಗಲ್ಲ. ಅಂತಿಮವಾಗಿ ಲೈಂಗಿಕತೆ ಮತ್ತು ಸಂಪತ್ತಿಗೆ ಸಂಬಂಧಿಸಿದಂತೆ ಹಲವಾರು ನೈತಿಕ ನಿಯಮಗಳನ್ನು ರೂಪಿಸಬೇಕಾಗಬಹುದು. ಆದರೆ ನೈತಿಕತೆ ಎನ್ನುವ ವಿಚಾರದಲ್ಲೇ ಇವೆರಡಕ್ಕೂ ಸಂಬಂಧಿಸಿದಂತೆ ಯಾವುದೇ ಉಲ್ಲೇಖವಿಲ್ಲ ಎನ್ನುವುದು ಸ್ವಯಂಸ್ಪಷ್ಟವಾಗಿದೆ. ಸಂಪತ್ತು ಎಂದರೆ ಏನು ಎನ್ನುವ ಕಲ್ಪನೆಯಾಗಲೀ ಅಥವಾ ಅದರಲ್ಲಿ ಆಸಕ್ತಿಯಾಗಲೀ ಇಲ್ಲದಿದ್ದ ಒಂದು ದ್ವೀಪಕ್ಕೆ ಸೇರಿದ

ಬುಡಕಟ್ಟು ಜನರನ್ನು ಸಂಧಿಸಿದಾಗ ಅವರಿಗೆ, ಯಾವುದೇ ನೈತಿಕ ಪ್ರಜ್ಞೆ ಇಲ್ಲ ಎನ್ನುವುದು ಸ್ಪಷ್ಟ ಎಂದು ಯಾರೂ ಹೇಳುವುದಿಲ್ಲ. ಆದರೆ ಯಾವುದೇ ಸಮಾಜವು ವ್ಯಕ್ತಿಗಳಿಗೆ ಯಾವೊಂದು ಸ್ವಾತಂತ್ರ್ಯವನ್ನೂ ನೀಡದಿದ್ದರೆ ಈ ಮಾತನ್ನು ಖಂಡಿತಾ ಹೇಳುತ್ತಾರೆ. ಸ್ವಾತಂತ್ರ್ಯವು ಅವಶ್ಯಕವಾದಂತಹ ಒಂದು ನೈತಿಕ ಪರಿಗಣನೆಯೇ.

ಹಾಗೆಯೇ ಸತ್ಯವನ್ನು ಸಹ ನೈತಿಕವಾಗಿ ಒಳ್ಳೆಯದೆಂದು ವಿರುದ್ಧ ಬಣಗಳಿಗೆ ಸೇರಿದ ಜ್ಞಾನಿಗಳು ಸಾರ್ವತ್ರಿಕವಾಗಿ ಒಪ್ಪಿಕೊಳ್ಳುತ್ತಾರೆ. ಇದು, ನೈತಿಕ ಸಿದ್ಧಾಂತವೆಂದು ಯಾವುದು ಕರೆಸಿಕೊಳ್ಳುತ್ತದೋ ಅದರ ಅವಿಭಾಜ್ಯ ತತ್ವವಾಗಿರುತ್ತದೆ. ಇದು ಹಾಗಾಗದೇ ಇರಲು ಸಾಧ್ಯವೇ ಇಲ್ಲ, ಏಕೆಂದರೆ ಯಾವುದೇ ಬಣಕ್ಕೆ ಸೇರಿದ ತತ್ವಜ್ಞಾನಿಗಳಾಗಿದ್ದರೂ ಅವರೆಲ್ಲ ತಮ್ಮ ದೃಷ್ಟಿಕೋನಗಳ ಸತ್ಯಕ್ಕಾಗಿ ವಾದಿಸುವುದರಲ್ಲಿ ನಿರತರಾಗಿರುತ್ತಾರೆ. ಆದ್ದರಿಂದ ಮತ್ತೆ ಯಾವುದೇ ನಿರ್ದಿಷ್ಟ ಸತ್ಯಗಳಿಗಿಂತ ಭಿನ್ನವಾದ, ಅಮೂರ್ತವಾದ ಸತ್ಯವನ್ನು ಇನ್ನೊಂದು ಒಪ್ಪಿತ ಮೌಲ್ಯವೆಂದು ಅಂಗೀಕರಿಸಲಾಗುತ್ತದೆ. ಕೆಲವರು ಇದನ್ನು ಒಂದು ಮೌಲ್ಯವೆಂದು ಆದರೆ ನೈತಿಕ ಮೌಲ್ಯ ಅಲ್ಲ ಎಂದು ಪರಿಗಣಿಸುತ್ತಾರೆ ಎನ್ನುವುದನ್ನು ಪ್ರಾಯಶಃ ಊಹಿಸಿಕೊಳ್ಳಬಹುದು. ಆದರೆ ನೈತಿಕತೆ ಎಂದು ಪ್ರತಿಪಾದಿಸಿದುದೆಲ್ಲ ಸತ್ಯ ಎನ್ನುವುದನ್ನು ಲೆಕ್ಕಕ್ಕೆ ತೆಗೆದುಕೊಳ್ಳದ (ನೈತಿಕವಾಗಿ) ನೈತಿಕ ಸಿದ್ಧಾಂತದ ಪರಿಕಲ್ಪನೆಯನ್ನು ಅರ್ಥಮಾಡಿಕೊಳ್ಳುವುದು ಖಂಡಿತವಾಗಿಯೂ ಅಸಾಧ್ಯವಾದದ್ದು. ನಾವು ಕರುಣಾಳುಗಳಾಗಿರಬೇಕು ಎನ್ನುವುದು ಕೇವಲ ನೈತಿಕ ಕಾಳಜಿಯ ವಿಷಯ ಅಲ್ಲ. ಬದಲಿಗೆ ನಾವು ಕರುಣಾಳುಗಳಾಗಿರಬೇಕು ಎನ್ನುವುದು ಸತ್ಯವೂ ಆಗಿರಬೇಕು ಎನ್ನುವುದೂ ಸಹ ನೈತಿಕ ಕಾಳಜಿಯ ವಿಷಯ.

ಯಾವುದೇ ನೈತಿಕ ಸಿದ್ಧಾಂತವು ಸತ್ಯದ ಮೌಲ್ಯವನ್ನು ಗೌರವಿಸಬೇಕು ಎಂದು ವಾದ ಮಾಡುವುದಕ್ಕೂ, ಸತ್ಯವನ್ನು ಹೇಳುವುದು ಯಾವಾಗಲೂ ನೈತಿಕವಾಗಿ ಸರಿಯಾದದ್ದು ಎನ್ನುವುದಕ್ಕೂ ಭಾರೀ ವ್ಯತ್ಯಾಸವಿದೆ. ಹಾಗೆ ನೋಡಿದರೆ, ಸಾಮಾನ್ಯವಾಗಿ ಸತ್ಯವನ್ನು ಹೇಳುವುದು ಒಳ್ಳೆಯದು ಎಂದರೂ, ಬಹುತೇಕ ಎಲ್ಲ ನೀತಿಸಿದ್ಧಾಂತಗಳೂ ಇದನ್ನೇ ಪ್ರತಿಪಾದಿಸಿದರೂ, ಇದಕ್ಕೂ ಹಾಗೂ ಕೆಲವೊಂದು ಸಲ ನಾವು ಹಾಗೆ ಮಾಡದಿರುವುದನ್ನು ಸಮರ್ಥಿಸಿಕೊಳ್ಳಲು ಅವಕಾಶ ನೀಡುವುದಕ್ಕೂ ವ್ಯತ್ಯಾಸವಿದೆ. ಯಾವುದೇ ವಿಷಯದಲ್ಲಾಗಲೀ ಅದು ನೈತಿಕತೆಯ ಸ್ವಭಾವದ ಭಾಗವೇ ಹೌದು ಎಂದು ಒತ್ತಾಯಿಸುವ ರೀತಿಯಲ್ಲೇ ಅದು ಸ್ವಾತಂತ್ರ್ಯದ ತತ್ವಕ್ಕೆ ಪ್ರಥಮ ವೀಕ್ಷಣೆಯಲ್ಲೇ ಬದ್ಧತೆ ಹೊಂದಿರಬೇಕು ಎನ್ನುವುದು ಯಾವ ನಿರ್ದಿಷ್ಟ ಸ್ವಾತಂತ್ರ್ಯಗಳು ಸಮರ್ಥನೀಯವಾದವುಗಳು, ಅಗತ್ಯವಾದವುಗಳು ಅಥವಾ ಮುಖ್ಯವಾದವುಗಳು ಎಂಬುದರ ಬಗ್ಗೆ ವಿಶೇಷವಾಗಿ ಏನನ್ನೂ ಸೂಚಿಸುವುದಿಲ್ಲ. ಆದ್ದರಿಂದ ಸತ್ಯವು ಒಂದು ನೈತಿಕ ಮೌಲ್ಯ ಅಥವಾ ಸತ್ಯಕ್ಕೆ ಮೊದಲ ನೋಟದಲ್ಲೇ ಬದ್ಧತೆ ಇದೆ ಎಂದು ಒತ್ತಾಯಿಸುವುದು ಸತ್ಯವನ್ನು ಯಾವಾಗ ಮತ್ತು ಎಲ್ಲಿ ನಿರ್ಲಕ್ಷಿಸುವುದು ನ್ಯಾಯಯುತವಾದದ್ದು ಎನ್ನುವುದರ ಬಗ್ಗೆ ನಿರ್ದಿಷ್ಟವಾಗಿ ಏನನ್ನೂ ಸೂಚಿಸುವುದಿಲ್ಲ.

ಯಾವಾಗ ಸುಳ್ಳು ಹೇಳುವುದು, ಸತ್ಯವನ್ನು ಮರೆಮಾಚುವುದು ನೈತಿಕವಾಗಿ ನ್ಯಾಯಯುತವಾದುದು ಎನ್ನುವ ಪ್ರಶ್ನೆಯ (ನಾವು ನಿರೀಕ್ಷಿಸುವ ಖಚಿತ ಉತ್ತರಗಳು ಸಿಗದೇ ಇರಬಹುದಾದಂತಹ ಪ್ರಶ್ನೆಗಳು) ಕುರಿತು ಹಾಗೂ ಸತ್ಯವನ್ನು ಗೌರವಿಸುವುದಕ್ಕೂ ಮತ್ತು ಸತ್ಯವನ್ನು ಹೇಳುವುದನ್ನು ಗೌರವಿಸುವುದಕ್ಕೂ ಮಧ್ಯೆ ಇರುವ ವ್ಯತ್ಯಾಸದ ಕುರಿತು ಅಂತಿಮವಾಗಿ ನಾವು ಆಲೋಚಿಸಬೇಕಾಗಿದೆ. ಕಡೆಯ ಎರಡು ವಿಷಯಗಳು ಸ್ಪಷ್ಟವಾಗಿಯೇ ಒಂದಕ್ಕೊಂದು ಸಂಬಂಧಿಸಿದ ವಿಷಯಗಳು ಹಾಗೂ ಸತ್ಯವನ್ನು ಗೌರವಿಸುವುದು ಸ್ವಲ್ಪ ಮಟ್ಟಿಗೆ ಸತ್ಯವನ್ನು ಹೇಳುವುದನ್ನು

ಗೌರವಿಸುವುದಕ್ಕೆ ಬಹುಶಃ ಎಡೆಮಾಡಿಕೊಡುತ್ತದೆ. ಆದರೆ ಎಲ್ಲವೂ ಸರಿಯಾಗಿರಬೇಕೆಂದರೆ ಸತ್ಯವನ್ನು ಗೌರವಿಸುವುದು ಮುಖ್ಯ ಎನ್ನುವುದಕ್ಕೂ, ಸತ್ಯವನ್ನು ಒಬ್ಬರಿನ್ನೊಬ್ಬರಿಗೆ ಹೇಳುವುದನ್ನು ಅನುಮೋದಿಸುವುದಕ್ಕೂ ವ್ಯತ್ಯಾಸವಿದೆ. ಮೊದಲನೆಯದನ್ನು ಶೋಧನೆಯಲ್ಲಿ ಸತ್ಯವನ್ನು ಗೌರವಿಸುವುದು ಎಂದೂ, ಎರಡನೆಯದನ್ನು ಸಾಮಾಜಿಕ ಅಂತಃಸಂಬಂಧದಲ್ಲಿ ಸತ್ಯವನ್ನು ಗೌರವಿಸುವುದು ಎಂದೂ ಉಲ್ಲೇಖಿಸುವ ಮೂಲಕ ನಾವು ಈ ವ್ಯತ್ಯಾಸವನ್ನು ಗುರುತಿಸಬಹುದು. ಉದಾಹರಣೆಗೆ, ವಿಜ್ಞಾನಿಗಳು ಪ್ರಾಮಾಣಿಕವಾಗಿ ತಮ್ಮ ಪ್ರಯೋಗಗಳನ್ನು ಮುಂದುವರೆಸಿ, ಸತ್ಯವಾದ ತೀರ್ಮಾನಗಳಿಗೆ ತಲುಪಬೇಕು ಎಂದು ಒತ್ತಾಯಿಸಬಹುದು. ಆದರೆ ಅವರು ಈ ತೀರ್ಮಾನಗಳ ನಿಜವಾದ ವರದಿಯನ್ನು ಪ್ರಪಂಚಕ್ಕೆ ತಿಳಿಸಬೇಕು ಸಹ ಎಂದು ಕಲ್ಪಿಸಿಕೊಳ್ಳಬಾರದು (ಉದಾ: ಅವರು ಸಂಭಾವ್ಯ ಮಾರಕ ಸೂಕ್ಷ್ಮಾಣುಗಳ ಮೇಲೆ ಸಂಶೋಧನೆ ಕೈಗೊಂಡಿದ್ದ ಸಂದರ್ಭದಲ್ಲಿ). ಆದರೆ ನೈತಿಕತೆಯ ಕಲ್ಪನೆಯ ಒಳಗಡೆಯೇ ಸತ್ಯಕ್ಕೆ ಹೆಚ್ಚಿನ ಬೆಲೆಯನ್ನು ಕಟ್ಟಲಾಗಿದೆ ಎಂದು ಹೇಳುವುದು ಈಗ ಸದ್ಯಕ್ಕೆ ಸಾಕಾದೀತು.

ನಾನು ಪರಿಚಯಿಸಬೇಕಾಗಿರುವ ಐದನೇ ತತ್ವವನ್ನು ಈಗಾಗಲೇ ಹೆಸರಿಸಲಾಗಿದೆ: ಆ ತತ್ವವು ಜನತೆಯ ಸೌಖ್ಯಕ್ಕೆ ಸಂಬಂಧಿಸಿದ್ದು. ನಾನು ಮೇಲಿನ 2ನೇ ಅಧ್ಯಾಯದಲ್ಲಿ ಹೇಳಿರುವಂತೆ, ಈ ತತ್ವಕ್ಕೆ ಅತ್ಯಂತ ಸಮರ್ಪಕವಾದ ಹೆಸರನ್ನು ಹುಡುಕುವುದು ಅಷ್ಟು ಸುಲಭವಲ್ಲ (ಸಂತೋಷ, ಔದಾರ್ಯ, ಸೌಖ್ಯ, ಸದ್ಭಾವನೆ, ದುರುದ್ದೇಶವಿಲ್ಲದಿರುವಿಕೆ, ಬಾಧೆ ಇಲ್ಲದಿರುವಿಕೆ) ಹಾಗೂ ಈ ವಿವಿಧ ಪದಗಳು ಸೂಕ್ಷ್ಮವಾದ ವ್ಯತ್ಯಾಸಗಳನ್ನು ಹೊಂದಿರುವ ಪರಿಕಲ್ಪನೆಗಳನ್ನು ಸ್ವಲ್ಪಮಟ್ಟಿಗೆ ತೋರಿಸಬಹುದು. 'ಉಪಕಾರ'ದ ತತ್ವ ಮತ್ತು 'ಸದ್ಭಾವನೆ'ಯ ತತ್ವಗಳು ಒಂದೇ ಭಾವನೆಯ ಎರಡು ಹೆಸರುಗಳಿರಬಹುದು ಅಥವಾ ಅವುಗಳಿಗೆ ಸ್ವಲ್ಪ ಬೇರೆಯದಾದ ಸಂಕೇತಾರ್ಥಗಳಿರಬಹುದು; ಹೇಗೆ ಸಂತೋಷವನ್ನು ಬೆಳೆಸುವುದು ಮತ್ತು ಸಂಕಟವನ್ನು ಕಡಿಮೆ ಮಾಡುವುದು ಎನ್ನುವುದರ ಮಧ್ಯೆ ವ್ಯತ್ಯಾಸವಿದೆಯೋ ಹಾಗೆ 'ಔದಾರ್ಯ' ಎಂಬ ಸಕಾರಾತ್ಮಕ ಸೂತ್ರ ಹಾಗೂ 'ದುರುದ್ದೇಶವಿಲ್ಲದಿರುವಿಕೆ' ಎಂಬ ನಕಾರಾತ್ಮಕ ಸೂತ್ರದ ಮಧ್ಯೆ ಎಷ್ಟೇ ಸೂಕ್ಷ್ಮವಾದದ್ದಾದರೂ ಖಂಡಿತವಾಗಿಯೂ ವ್ಯತ್ಯಾಸವಿದೆ. ನೈತಿಕತೆಯು ಅವಶ್ಯಕವಾಗಿಯೇ ಮುಂಚಿನ ನಾಲ್ಕು ತತ್ವಗಳನ್ನು ಒಳಗೊಳ್ಳುತ್ತದೆ ಎಂದು ಹೇಳಲಾಗಿದೆ. ಆದರೆ ಬಹಳ ಮೇಲಿನ ಸ್ತರದಲ್ಲಿ ಅವುಗಳನ್ನು ನಿರ್ದಿಷ್ಟ ನಿಯಮಾವಳಿಗಳ ಸಮುಚ್ಚಯ ಎನ್ನುವ ರೀತಿಯಲ್ಲಿ ಅರ್ಥಮಾಡಿಕೊಂಡರೆ ಅದು ತಪ್ಪಾಗುತ್ತದೆ. ಆದ್ದರಿಂದ ಇಲ್ಲಿ ನಮಗೆ ಸಾಮಾನ್ಯವಾದ ಹಾಗೂ ಪ್ರಶ್ನೆಯನ್ನು ಹುಟ್ಟಿಸದ ಪದ ಬೇಕಾಗುತ್ತದೆ, ಆ ಕಾರಣಕ್ಕಾಗಿಯೇ 'ಸೌಖ್ಯ' ಎಂಬ ಪದವನ್ನು ಆರಿಸಿಕೊಳ್ಳಲಾಗಿದೆ. ಇದು ಅತ್ಯುತ್ತಮವಲ್ಲದಿದ್ದರೂ, ಸಂತೋಷಕ್ಕಿಂತ ಹೆಚ್ಚು ಅರ್ಥಕ್ಕೆ ತೆರೆದುಕೊಂಡಿರುವಂಥದ್ದು ಹಾಗೂ ಸಾಮಾನ್ಯವಾಗಿರುವಂಥದ್ದು. ಕೆಲವರು ನೈತಿಕತೆಗೆ ಸಂತೋಷದೊಂದಿಗೆ ಅಂತಹ ಸಂಬಂಧವೇನೂ ಇಲ್ಲ ಎಂದು ವಾದಿಸಲು ಇಚ್ಛಿಸಬಹುದು. ಆದರೂ ಸಹ ಈ ಪದವು ಪ್ರಜ್ಞಾಪೂರ್ವಕ ತೃಪ್ತಿಯನ್ನು ಹಾಗೂ ಬಯಕೆಗಳನ್ನು ಪೂರ್ಣಗೊಳಿಸಿಕೊಳ್ಳುವುದನ್ನು ಸೂಚಿಸಿದರೆ ಸಾಕು; ನೈತಿಕ ಸಿದ್ಧಾಂತವು ಯಾವುದೇ ರೀತಿಯಲ್ಲೂ ಜನತೆಯ ಸೌಖ್ಯದ ಜೊತೆಗೆ ಸಂಬಂಧವನ್ನು ಹೊಂದಿರಬೇಕಾಗಿಲ್ಲ ಎಂದು ಯಾರಾದರೂ ಹೇಗೆ ವಾದಿಸಲು ಸಾಧ್ಯ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ.

ಸೌಖ್ಯದ ಮಾನದಂಡಗಳು ನಿಖರವಾಗಿ ಯಾವುದಿರಬಹುದು, ಯಾವುದು ಅದನ್ನು ಸಾಮಾನ್ಯವಾಗಿ ಹಾಗೂ ನಿರ್ದಿಷ್ಟ ಸಂದರ್ಭಗಳಲ್ಲಿ ಪ್ರೇರೇಪಿಸುತ್ತದೆ ಹಾಗೂ ಇತರ ನೈತಿಕ ಪರಿಗಣನೆಗಳನ್ನು ಅದು ಮೀರಲು ಸಾಧ್ಯವೇ ಅಥವಾ

ಯಾವಾಗ ಮೀರತಕ್ಕದ್ದು ಎನ್ನುವ ವಿಷಯಗಳ ಕುರಿತು ವಾದ ಮಾಡಲು ಅವಕಾಶವಿದೆ. ಆದರೆ ಒಂದು ಸಮಾಜವು ಜನತೆಯ ಸೌಖ್ಯದ ಕುರಿತು ಸೂಚ್ಯವಾಗಿಯಾದರೂ ಉಲ್ಲೇಖಿಸದ ನೀತಿ ಸಂಹಿತೆಯನ್ನು ಹೊಂದಿದ್ದರೆ ಆಗ ಅದು ವಾಸ್ತವದಲ್ಲಿ ಯಾವುದೇ ಗುರುತಿಸಬಹುದಾದ ನೈತಿಕ ಸಂಹಿತೆಯನ್ನು ಹೊಂದಿರಲು ಸಾಧ್ಯವಿರಲಿಲ್ಲ ಎಂದು ಸ್ಥಾಪಿಸುವುದೇ ಇಲ್ಲಿಯ ಉದ್ದೇಶ. ಮೊದಲಿಗೆ, ಕೊಟ್ಟ ಮಾತನ್ನು ಉಳಿಸಿಕೊಳ್ಳಬೇಕು ಅಥವಾ ಕದಿಯಬಾರದು ಎನ್ನುವಂತಹ ನಿಯಮಗಳನ್ನು ಪಾಲಿಸುವುದು ಸ್ವಲ್ಪ ಮಟ್ಟಿಗಾದರೂ ಯಾವುದೇ ರೀತಿಯಲ್ಲಿ ಜನತೆಯ ಅನುಕೂಲಕ್ಕೆ ಉಪಯೋಗವಾಗುತ್ತಿತ್ತು ಎಂದು ಊಹಿಸಿಕೊಳ್ಳದಿದ್ದರೆ, ಅಂತಹ ಪ್ರತಿಪಾದನೆಗಳನ್ನು ಏಕೆ ಮಾಡಬೇಕಿತ್ತು ಎಂಬುದನ್ನೂ ಅರ್ಥಮಾಡಿಕೊಳ್ಳುವುದು ಕಷ್ಟ. "ಯಾವುದೇ ವ್ಯಕ್ತಿ ಕದಿಯಬಾರದು ಎಂದು ನನಗೆ ತಿಳಿದಿದೆ: ಆದರೆ ಅಯ್ಯೋ, ಈ ನಿಯಮವಿಲ್ಲದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು" ಎನ್ನುವುದು ಸ್ಪಷ್ಟವಾಗಿಯೇ ಅಸಂಬದ್ಧ ಹೇಳಿಕೆ. ಈಗಾಗಲೇ ನಾನು ಒಪ್ಪಿಕೊಂಡಿರುವಂತೆ ಯಾವುದು ಜನತೆಯನ್ನು 'ಇನ್ನೂ ಚೆನ್ನಾಗಿ ಇರಿಸುತ್ತದೆ' ಅಥವಾ ಅವರಿಗೆ 'ಅನುಕೂಲವಾಗುತ್ತದೆ' ಎನ್ನುವ ಸಂಕೀರ್ಣವಾದ, ಕಷ್ಟದ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬೇಕಾಗಿದೆ ನಿಜ, ಆದರೆ ನೀತಿ ಸಂಹಿತೆ ಎಂದು ಕರೆಸಿಕೊಳ್ಳುವ ಯಾವುದೇ ಆಗಲಿ ಅದು, ಯಾವುದೋ ಒಂದು ರೀತಿಯಲ್ಲಿ ವೈಯಕ್ತಿಕವಾಗಿ ಅಥವಾ ಸಾಮೂಹಿಕವಾಗಿ ಅಥವಾ ಎರಡೂ ರೀತಿಯಲ್ಲಿ ಜನತೆಗೆ ಅನುಕೂಲವಾಗುತ್ತದೆ ಎಂದು ಊಹಿಸಿಕೊಳ್ಳಬೇಕು ಎನ್ನುವ ಅಂಶವನ್ನು ಅದು ಬದಲಾಯಿಸುವುದಿಲ್ಲ. ನಮ್ಮ ನಡವಳಿಕೆಯನ್ನು ಕೆಲವು ಮಾನದಂಡಗಳು ಅಥವಾ ರೂಢಿಗಳಿಗೆ ಅನುಗುಣವಾಗಿ ನಿಯಂತ್ರಿಸುವುದು ನೈತಿಕ ನಡವಳಿಕೆಯ (ಇಲ್ಲಿ ನಾವು ನೈತಿಕತೆಯನ್ನು ಧರ್ಮದಿಂದ ಪ್ರತ್ಯೇಕಿಸುತ್ತಿದ್ದೇವೆ ಹಾಗೂ ನಮಗೆ ಬೋಧಿಸಿರುವಂತೆ ಮೋಕ್ಷ ಸಾಧನೆಗಾಗಿ ಇದನ್ನು ಮಾಡುತ್ತಿಲ್ಲ ಎಂದು ನೆನಪಿನಲ್ಲಿಟ್ಟುಕೊಳ್ಳಬೇಕು) ಭಾಗವಾಗಿದೆ. ಆದರೆ ನಿಯಂತ್ರಣಕ್ಕೆ ಯಾವುದಾದರೊಂದು ಉದ್ದೇಶವಿರಬೇಕು. ನಾವು ಸಾಮಾಜಿಕ ಪ್ರಾಣಿಗಳು ಎನ್ನುವುದನ್ನು ಮನಸ್ಸಿನಲ್ಲಿಟ್ಟುಕೊಂಡರೆ ನಮ್ಮ ಅಂತಿಮ ಕಾಳಜಿಯು ಖಂಡಿತವಾಗಿಯೂ ನಮ್ಮ ಸೌಖ್ಯವೇ ಆಗಿದೆ.

ನಾನು ಸೌಂದರ್ಯ ಅಥವಾ ಕಲಾತ್ಮಕ ಗುಣದ ಆರನೇ ತತ್ವವನ್ನು ಸೇರಿಸಬೇಕೆಂಬ ಪ್ರಲೋಭನೆಗೊಳಗಾಗಿದ್ದೇನೆ. ಆದರೆ ನಾನು ಹಾಗೆ ಮಾಡುವುದಿಲ್ಲ. ಸೌಂದರ್ಯ ಅಥವಾ ಕಲಾತ್ಮಕ ಗುಣವನ್ನು ಅಪಾರವಾಗಿ ಗೌರವಿಸುವ ಹಾಗೂ ಸೌಂದರ್ಯದಿಂದ ಗುಣಮಟ್ಟವನ್ನು ಹೆಚ್ಚಿಸಿಕೊಂಡಿರುವ ಜಗತ್ತು ನೈತಿಕವಾಗಿಯೂ, ಕಲಾತ್ಮಕವಾಗಿಯೂ ಇನ್ನೂ ಉತ್ತಮವಾದ ಸ್ಥಳ ಎಂದು ಭಾವಿಸುವ ತತ್ವಜ್ಞಾನಿಗಳೊಂದಿಗೆ ನಾನು ವೈಯಕ್ತಿಕವಾಗಿ ಗುರುತಿಸಿಕೊಳ್ಳುವುದು, ನನ್ನ ಪ್ರಲೋಭನೆಗೆ ಕಾರಣ. ಕೆಲವರು ಮಾಡಿರುವಂತೆ ನಾನು ಸೌಂದರ್ಯವನ್ನು ಒಳಿತಿನೊಂದಿಗೆ ಗುರುತಿಸುವುದಿಲ್ಲ ಹಾಗೂ ನೈತಿಕತೆ ಮತ್ತು ಸೌಂದರ್ಯಗಳು ಪ್ರತ್ಯೇಕಿಸಲಾಗದಂತಹವು ಎಂದು ವಾದಿಸುವುದಿಲ್ಲ (ಅವುಗಳು ಹಾಗೇನೂ ಅಲ್ಲ); ಆದರೆ ನೈತಿಕ ಜಗತ್ತು ಸುಳ್ಳು, ಅಸಂತೋಷ ಮುಂತಾದವುಗಳನ್ನು ತೊಡೆದು ಹಾಕಲು ಎಷ್ಟು ಕಾಳಜಿ ವಹಿಸುತ್ತದೋ ಕೆಟ್ಟದ್ದನ್ನು ತೊಡೆದುಹಾಕಲು ಸಹ ಅಷ್ಟೇ ಕಾಳಜಿ ವಹಿಸುತ್ತದೆ ಎನ್ನುವ ನಿಲುವನ್ನು ನಾನು ಇಷ್ಟಪಡುತ್ತೇನೆ. ನಾನು ಯಾವ ಮೌಲ್ಯಗಳನ್ನು ಎತ್ತಿ ಹಿಡಿಯುತ್ತೇನೆ ಎಂಬುದನ್ನು ಮಾತ್ರ ನಾವು ಚರ್ಚೆ ಮಾಡುತ್ತಿಲ್ಲ ಎನ್ನುವುದನ್ನು ಓದುಗರಿಗೆ ನೆನಪಿಸುವುದಕ್ಕಾಗಿ ಈ ವಿಷಯವನ್ನು ಕೇವಲ ಪ್ರಸ್ತಾಪಿಸಿ ಪಕ್ಕಕ್ಕಿಡುತ್ತೇನೆ; ನಾವು ಹಾಗೇನಾದರೂ ಮಾಡುತ್ತಿದ್ದರೆ ಆಗ ಖಂಡಿತವಾಗಿಯೂ ಸೌಂದರ್ಯದ ತತ್ವವನ್ನು ಸೇರಿಸಬೇಕಾಗಿತ್ತು. ಆದರೆ ವ್ಯಕ್ತಿಯ ನಿರ್ದಿಷ್ಟ ಸಂದರ್ಭ ಅಥವಾ ತಾತ್ವಿಕ ನಿಲುವುಗಳು ಏನೇ ಆಗಿದ್ದರೂ ಸಹ ನೈತಿಕತೆಯ ಅರ್ಥದ

ನಿರಾಕರಿಸಲಾಗದಂತಹ ಭಾಗ ಎಂದು ಯೋಚಿಸಲು ಕಾರಣವಿರುವಂತಹ ಮೌಲ್ಯಗಳ ಬಗ್ಗೆ ನಾವು ಚರ್ಚಿಸುತ್ತಿದ್ದೇವೆ. ನಾನು ಸೌಂದರ್ಯವನ್ನು ಸ್ವಾತಂತ್ರ್ಯದಷ್ಟೇ ಗೌರವಿಸುತ್ತೇನಾದರೂ, ಅನೇಕರು ಹಾಗೆ ಭಾವಿಸುವುದಿಲ್ಲ ಎಂದು ನಾನು ಒಪ್ಪುತ್ತೇನೆ. ಹೆಚ್ಚು ಮುಖ್ಯವಾದ ವಿಷಯವೆಂದರೆ, ಹಾಗೆ ವಾದ ಮಾಡುವುದು ಅಸಂಬದ್ಧ ಅಲ್ಲ, ಬದಲಿಗೆ ಸೌಂದರ್ಯವು ನೈತಿಕತೆಗಿಂತ ಸಂಪೂರ್ಣವಾಗಿ ಭಿನ್ನವಾದುದು ಹಾಗೂ ನೈತಿಕತೆಯೊಂದಿಗೆ ಸಂಬಂಧವೇ ಇಲ್ಲದಂಥದ್ದು ಎಂದು ವಾದಿಸಬಹುದು. ಆದರೆ ಇತರ ಐದು ತತ್ವಗಳ ಬಗ್ಗೆ ಹಾಗೆ ಹೇಳಲಾಗುವುದಿಲ್ಲ: ನ್ಯಾಯಪರತೆ, ವ್ಯಕ್ತಿಗಳ ಬಗ್ಗೆ ಗೌರವ, ಸತ್ಯವನ್ನು ಹೇಳುವುದು, ಸ್ವಾತಂತ್ರ್ಯ ಹಾಗೂ ಸೌಖ್ಯಗಳಿಗೆ ನೈತಿಕತೆಯೊಂದಿಗೆ ಯಾವುದೇ ಸಂಬಂಧವಿಲ್ಲ ಎಂದು ವಾದಿಸುವುದು ಅಸಂಬದ್ಧವಾಗುತ್ತದೆ. ಅವುಗಳು ಸ್ಪಷ್ಟವಾಗಿ, ಸ್ವತಃಸಿದ್ಧವಾಗಿ ಹಾಗೂ ನಿರ್ವಿವಾದವಾಗಿ (ತಾರ್ಕಿಕವಾಗಿ ಹಾಗೂ ಐತಿಹಾಸಿಕ ವಾಸ್ತವದ ದೃಷ್ಟಿಯಿಂದ) ನಾವು ಏನನ್ನು ನೈತಿಕತೆ ಎಂದು ಅರ್ಥ ಮಾಡಿಕೊಳ್ಳುತ್ತೇವೋ (ಯಾವುದೇ ವಿಸ್ತಾರವಾದ ನಿರ್ದಿಷ್ಟ ಸಿದ್ಧಾಂತ ಅಥವಾ ನೀತಿ ಸಂಹಿತೆಗಿಂತ ಭಿನ್ನವಾದ) ಅದರ ಅವಶ್ಯಕವಾದ ಅಂಗಗಳಾಗಿವೆ. ನೈತಿಕತೆಯ ವ್ಯಾಖ್ಯಾನವೆಂದರೆ, ನ್ಯಾಯಪರವಾಗಿರುವುದು, ಎಲ್ಲರನ್ನೂ ಅವರಿರುವಂತೆಯೇ ಗುರುತಿಸುವುದು, ಸತ್ಯದ ಬಗ್ಗೆ ಕಾಳಜಿ, ಸ್ವಾತಂತ್ರ್ಯ ಹಾಗೂ ಸೌಖ್ಯಗಳಿಗೆ ಪ್ರಥಮ ವೀಕ್ಷಣೆಯಲ್ಲೇ ಹೆಚ್ಚಿನ ಬೆಲೆ ಕೊಡುವುದು, ಈ ತತ್ವಗಳು (ಬೇರೆ ಯಾವುದೂ ಅಲ್ಲ ಎಂದು ನನಗನಿಸುತ್ತದೆ) ವಿಷಯ ಕ್ಷೇತ್ರವನ್ನು ವ್ಯಾಖ್ಯಾನಿಸುತ್ತವೆ. (ಯಾವುದೇ ಒಂದು ನಿರ್ದಿಷ್ಟ ಸಂದರ್ಭದಲ್ಲಿ ನಾವು ಏನು ಮಾಡಬೇಕು ಎನ್ನುವುದನ್ನು ಅವು ಹೇಳುವುದಿಲ್ಲ ಎನ್ನುವುದೇನೋ ನಿಜ.)

ನಾನು ಸುಮ್ಮನೇ ಈ ಪ್ರಶ್ನೆ ಕೇಳುತ್ತಿದ್ದೇನೆಂದು ಅನಿಸಬಹುದು; ನಾನು ನೈತಿಕತೆಯನ್ನು ಈ ರೀತಿ ವ್ಯಾಖ್ಯಾನಿಸುತ್ತಿದ್ದೇನೆ ಆದರೆ ಬೇರೆ ಯಾರಾದರೂ ಅದನ್ನು ಬೇರೆ ರೀತಿಯಲ್ಲಿ ಏಕೆ ವ್ಯಾಖ್ಯಾನಿಸಬಾರದು? ಆದರೆ ಈ ಪ್ರಶ್ನೆಯನ್ನು ತಪ್ಪಾಗಿ ಭಾವಿಸಲಾಗಿದೆ. ಅನೈತಿಕ ಸಿದ್ಧಾಂತಕ್ಕೆ ವಿರುದ್ಧವಾದ ನೈತಿಕ ಸಿದ್ಧಾಂತ ಎಂದು ನಾವು ಏನನ್ನು ಅರ್ಥಮಾಡಿಕೊಳ್ಳುತ್ತೇವೋ ಅದರ ಬಗ್ಗೆ ಯೋಚಿಸಿದರೆ ಆಗ ಈ ತತ್ವಗಳು ಅದರಲ್ಲಿ ಅಡಕವಾಗಿರುವುದನ್ನು ಕಾಣುತ್ತೇವೆ ಎಂಬ ವಾದದ ನ್ಯಾಯಸಮ್ಮತತೆಯನ್ನು ಗುರುತಿಸಬೇಕೆಂದು ನಾನು ಓದುಗರೊಂದಿಗೆ ವಾದಿಸುತ್ತಿದ್ದೇನೆ ಹಾಗೂ ಮನವಿಮಾಡಿಕೊಳ್ಳುತ್ತಿದ್ದೇನೆ. ನಾನು ಇದರಲ್ಲಿ ಯಶಸ್ವಿಯಾಗಿದ್ದೇನೋ ಇಲ್ಲವೋ ಎಂದು ಓದುಗರೇ ನಿರ್ಧರಿಸಬೇಕು.

ಟಿಪ್ಪಣಿ

ನಾನು ಉದಾಹರಣೆಗಾಗಿ ಏಳು ತತ್ವಜ್ಞಾನಿಗಳನ್ನು ಹೆಸರಿಸಿದ್ದೇನೆ (ನಿರ್ದಿಷ್ಟ ವ್ಯಕ್ತಿಗಳ ಬಗ್ಗೆ ಉಲ್ಲೇಖವನ್ನು ಮಾಡಬಾರದು ಎಂದು ನಾನು ಉದ್ದೇಶಪೂರ್ವಕವಾಗಿ ತೀರ್ಮಾನಿಸಿದ್ದರೂ ಸಹ). ತತ್ವಜ್ಞಾನಿಗಳು ಒಂದು ಕಾಲಾವಧಿಯ ತಾತ್ವಿಕ ಅಭಿಪ್ರಾಯಗಳ ಯಾದೃಚ್ಛಿಕ ಸೀಳುನೋಟವನ್ನು ಹೆಚ್ಚು ಕಡಿಮೆ ಪ್ರತಿನಿಧಿಸುವವರು ಎಂದು ಭಾವಿಸಲಾಗಿದೆ. ತತ್ವಶಾಸ್ತ್ರದ ಪಿತಾಮಹರಾದ ಪ್ಲೇಟೋರನ್ನು ಈಗಾಗಲೇ ಪರಿಚಯಿಸಲಾಗಿದೆ. ತಮ್ಮ ಕ್ರಿಟಿಕ್ ಆಫ್ ಪ್ಯೂರ್ ರೀಸನ್ ಅಂಡ್ ಗ್ರೌಂಡ್‌ವರ್ಕ್ ಆಫ್ ದಿ ಮೆಟಾಫಿಸಿಕ್ ಆಫ್ ಮಾರಲ್ಸ್ (ನೈತಿಕತೆಯ ತತ್ವ ಮೀಮಾಂಸೆಯ ತಳಪಾಯ) ಮುಂತಾದ ಕೃತಿಗಳ ಮೂಲಕ ತತ್ವಜ್ಞಾನಿಗಳಾದ ಇಮಾನ್ಯುಯೆಲ್ ಕಾಂಟ್ (1724-1804) ಅಪಾರವಾಗಿ ಪ್ರಭಾವಶಾಲಿಗಳಾಗಿದ್ದಾರೆ. ಸ್ಕಾಟ್ಲೆಂಡಿನ ಡೇವಿಡ್ ಹ್ಯೂಮ್ (1711-76) ಬ್ರಿಟಿಷ್ ಸಂಪ್ರದಾಯದ ಪ್ರಾಯೋಗಿಕ ಜ್ಞಾನದ

ನಿಲುವಿನ ತತ್ವಜ್ಞಾನಿಗಳಲ್ಲಿ ಅಗ್ರಗಣ್ಯ ಚಿಂತಕರೆಂದು ಆಗಾಗ್ಗೆ ಕರೆಸಿಕೊಳ್ಳುತ್ತಾರೆ. ಇವರ ಅತ್ಯಂತ ಜನಪ್ರಿಯ ಕೃತಿಯೆಂದರೆ "ಎ ಟ್ರೀಟಿಸ್ (treatise) ಆಫ್ ಹ್ಯೂಮನ್ ನೇಚರ್' ('ಮಾನವ ಸ್ವಭಾವದ ಕುರಿತಾದ ಗ್ರಂಥ'), ಆದರೆ ಅವರ 'ಆನ್ (An) ಇನ್ಕ್ವಯಿರಿ ಕನ್ಸರ್ನಿಂಗ್ ದಿ ಪ್ರಿನ್ಸಿಪಲ್ಸ್ ಆಫ್ ಮಾರಲ್ಸ್' (ನೈತಿಕತೆಯ ತತ್ವಗಳಿಗೆ ಸಂಬಂಧಿಸಿದ ಒಂದು ಶೋಧನೆ) ಹಾಗೂ ಅವರ ಪೊಲಿಟಿಕಲ್ ಎಸ್ಸೇಸ್' (ರಾಜಕೀಯ ಪ್ರಬಂಧಗಳು) ಕೃತಿಗಳನ್ನೂ ಸಹ ಗಮನಿಸಿ.

ಜಾನ್ ಸ್ಟುವರ್ಟ್ ಮಿಲ್, ಜಿ. ಇ. ಮೂರ್ ಮತ್ತು ಎ. ಸಿ. ಇವಿಂಗ್ ಅವರುಗಳ ಬಗ್ಗೆ ಈಗಾಗಲೇ ಉಲ್ಲೇಖಿಸಲಾಗಿದೆ. ದುರದೃಷ್ಟವಶಾತ್ ಸಮಕಾಲೀನ ನೈತಿಕ ತತ್ವಶಾಸ್ತ್ರದ ಪ್ರತಿನಿಧಿಯೆಂದು ಸೈಮನ್ ಬ್ಲಾಕ್ ಬರ್ನ್ ಅವರನ್ನು ಆರಿಸಲಾಗಿದೆ. ಮುಂಚೆಯೇ ಪ್ರಸ್ತಾಪವಾಗಿರುವಂತೆ "ಎಥಿಕ್ಸ್' (ನೈತಿಕತೆ) ಹಾಗೂ ಟ್ರೂಥ್ (ಸತ್ಯ), ಅವರ ಕೃತಿಗಳು.

ನೈತಿಕತೆಯನ್ನು ವ್ಯಾಖ್ಯಾನಿಸುತ್ತವೆ ಎಂದು ಯಾವ ಐದು ತತ್ವಗಳ ಕುರಿತು ನಾನು ಸೂಚಿಸಿದ್ದೇನೋ ಆ ಪ್ರತಿಯೊಂದರ ಕುರಿತು ರಾಶಿ ರಾಶಿ ಪುಸ್ತಕಗಳಿವೆ. 'ನೈತಿಕತೆ' ಎಂದರೆ ಏನು ಅಥವಾ ಅದರ ಅರ್ಥ ಏನು ಎನ್ನುವ ತಿಳಿವಳಿಕೆಯಿಂದ ಪ್ರಧಾನ ತತ್ವಗಳ ಸಾರಸತ್ವವನ್ನು ಗ್ರಹಿಸಲು ನಾನು ಬಳಸಿರುವ ವಿಧಾನಕ್ಕೆ ಸಂಬಂಧಿಸಿದಂತೆ ಈಗಾಗಲೇ ಉಲ್ಲೇಖಿಸಿರುವ ಆರ್. ಎಂ. ಹೇರ್ ಮತ್ತು ಜಾಫೆರ್ ವಾರ್ ನಾಕ್ ಹಾಗೂ ಪಿ. ಎಚ್. ನೊವೆಲ್ ಸ್ಮಿತ್ ಅವರ 'ಎಥಿಕ್ಸ್' (ನೈತಿಕತೆ) ಕೃತಿಗೆ ಆಭಾರಿಯಾಗಿದ್ದೇನೆ.

> ಪ್ರಮಾಣಕ: ಒಂದು ಪದ ಅಥವಾ ವಾಕ್ಯ ಇತ್ಯಾದಿಗಳ ಮೂಲ ಬಳಕೆಯು ಸ್ಪಷ್ಟವಾಗಿ ಅಥವಾ ಸೂಚ್ಯವಾಗಿ ರೂಢಿಗಳು ಅಥವಾ ಗುಣಮಟ್ಟಗಳನ್ನು ಒಳಗೊಳ್ಳುವಂತಿದ್ದರೆ ಅದನ್ನು ಬಳಸುವವರಿಗೆ ಅದು ಪ್ರಮಾಣಕ ಎನಿಸಿಕೊಳ್ಳುತ್ತದೆ. ಉದಾ: 'ಧರ್ಮಶ್ರದ್ಧೆಯು ಒಳ್ಳೆಯದು' ಎನ್ನುವುದು 'ನಾವು ಧರ್ಮಶ್ರದ್ಧೆಯುಳ್ಳವರಾಗಿರಲೇಬೇಕು' ಎಂಬ ಅರ್ಥ ಕೊಡುತ್ತದೆ ಅಥವಾ ಅದನ್ನು ಒಳಗೊಳ್ಳುತ್ತದೆ ಎನ್ನುವಲ್ಲಿ 'ಆಗಿರಲೇ ಬೇಕು' ಮತ್ತು 'ಒಳ್ಳೆಯದು' ಎನ್ನುವುದು ಪ್ರಮಾಣಕವಾಗುತ್ತದೆ.
>
> (ಎ. ಆರ್ ಲೇಸಿಯವರ ಎ ಡಿಕ್ಷನರಿ ಆಫ್ ಫಿಲಾಸಫಿ)

ಎಸ್. ಐ. ಬೆನ್ ಮತ್ತು ಆರ್. ಎಸ್. ಪೀಟರ್ಸ್ ಅವರ 'ಸೋಷಿಯಲ್ ಪ್ರಿನ್ಸಿಪಲ್ಸ್ ಅಂಡ್ ದಿ ಡೆಮಾಕ್ರೆಟಿಕ್ ಸ್ಟೇಟ್' (ಸಾಮಾಜಿಕ ತತ್ವಗಳು ಹಾಗೂ ಪ್ರಜಾಸತ್ತಾತ್ಮಕ ಪ್ರಭುತ್ವ') ಬರಹವು ರಾಜಕೀಯ ತತ್ವಶಾಸ್ತ್ರದ ಮೇಲೆ ಗಮನಹರಿಸಿದರೂ ಸಹ, ಇಲ್ಲಿ ಪರಿಚಯಿಸಿರುವ ಬಹುತೇಕ ಪರಿಕಲ್ಪನೆಗಳಿಗೆ ಸಂಬಂಧಿಸಿದಂತೆ ಅದರಲ್ಲೂ ಇತರರನ್ನು ಗೌರವಿಸುವುದು ಹಾಗೂ ಸಮಾನತೆಗೆ ಸಂಬಂಧಿಸಿದಂತೆ ಅಪಾರವಾಗಿ ಉಪಯುಕ್ತವಾಗಿದೆ. ಎರಡನೆಯದಕ್ಕೆ ಸಂಬಂಧಿಸಿದಂತೆ ಜಾನ್ ವಿಲ್ಸನ್ ಅವರ 'ಈಕ್ವಲಿಟಿ'ಯನ್ನು (ಸಮಾನತೆ) ಸಹ ಗಮನಿಸಿ. ಅಲನ್ ಮಾಂಟೆಫಯೊರೆ (ಸಂ.) ಅವರ 'ನ್ಯೂಟ್ರಾಲಿಟಿ ಅಂಡ್ ಇಂಪಾರ್ಷಿಯಾಲಿಟಿ' ಕೃತಿಯಲ್ಲಿ ನಿಷ್ಪಕ್ಷಪಾತತೆಯ ಕುರಿತು ಕೆಲವು ಆಸಕ್ತಿದಾಯಕ ವಿಚಾರಗಳಿವೆ. ಎಚ್. ಎಲ್. ಎ ಹಂಟ್ ಅವರ 'ಲಾ, ಲಿಬರ್ಟಿ ಅಂಡ್ ಮೊರಾಲಿಟಿ' (ಕಾನೂನು, ಸ್ವಾತಂತ್ರ್ಯ ಹಾಗೂ ನೈತಿಕತೆ) ಕೃತಿಯು ಈ ಅಧ್ಯಾಯದಲ್ಲಿ ಚರ್ಚಿಸಿರುವ ವಿಷಯಗಳ ವ್ಯಾಪ್ತಿಯಿಂದ ಹೊರಗಿದ್ದರೂ ಸಹ ಅದರ ಕ್ಷೇತ್ರದಲ್ಲಿ ಬಹಳ ಮುಖ್ಯವಾದ ಗ್ರಂಥವಾಗಿದೆ. ಸ್ವಾತಂತ್ರ್ಯದ ವಿಷಯಕ್ಕೆ ಸಂಬಂಧಿಸಿd ಅನೇಕ ಕೃತಿಗಳು ಹಾಗೂ ಲೇಖನಗಳಲ್ಲಿ ಟೆಡ್ ಹೊಂಡೆರಿಕ್ (ಸಂ.) ಅವರ 'ಎಸ್ಸೇಸ್ ಆನ್ ಫ್ರೀಡಂ ಆಫ್ ಆಕ್ಷನ್' (ಕ್ರಿಯೆಯ

ಸ್ವಾತಂತ್ರ್ಯದ ಕುರಿತು ಪ್ರಬಂಧಗಳು) ಕೃತಿಯನ್ನು ಗಮನಿಸಿ. ಜೊತೆಗೆ ಜಿ. ಪಿಚರ್ (ಸಂ.) ಅವರ 'ಟ್ರೂಥ್' ('ಸತ್ಯ') ಹಾಗೂ ಟಿ. ಎ ರಾಬರ್ಟ್ಸ್ ಅವರ 'ದಿ ಕಾನ್ಸೆಪ್ಟ್ ಆಫ್ ಬೆನೆವೊಲೆನ್ಸ್' (ಔದಾರ್ಯದ ಪರಿಕಲ್ಪನೆ) ಕೃತಿಗಳನ್ನು ಸಹ ಗಮನಿಸಿ. ಜಾನ್ ಹಾಸ್ ಪರ್ಸ್ ಅವರ 'ಹ್ಯೂಮನ್ ಕಾಂಡಕ್ಟ್' (ಮಾನವ ನಡವಳಿಕೆ) ಕೃತಿಯು ನೈತಿಕ ತತ್ವಶಾಸ್ತ್ರಕ್ಕೆ ಒಂದು ಸಮಗ್ರ ಪರಿಚಯದ ಕೃತಿಯಾಗಿದ್ದು ಈ ನೈತಿಕತೆಗೆ ಸಂಬಂಧಿಸಿದ ಹಲವಾರು ಪರಿಕಲ್ಪನೆಗಳನ್ನು ಒಳಗೊಳ್ಳುತ್ತದೆ. ವಿಲ್ ಫ್ರೆಡ್ ಸೆಲ್ಲರ್ಸ್ ಹಾಗೂ ಜಾನ್ ಹಾಸ್ಪರ್ಸ್ (ಸಂ.) ಅವರ 'ರೀಡಿಂಗ್ಸ್ ಇನ್ ಎಥಿಕಲ್ ಥಿಯರಿ' ಕೃತಿಯನ್ನೂ ಸಹ ಗಮನಿಸಿ.

'ಸಂತೋಷ' ಹಾಗೂ ಇನ್ನಿತರ ಅದಕ್ಕೆ ಸಮಾನವಾದ ಆದರೆ ತದ್ರೂಪಿಯಲ್ಲದ ಪದಗಳನ್ನು ಆರಿಸುವಲ್ಲಿನ ಕಷ್ಟಗಳ ಬಗ್ಗೆ ವ್ಯಾಖ್ಯಾನ ಮಾಡುತ್ತಾ, ನಾನು, ಕೆಲವರು ಯೂಡೈಮೋನಿಯಾ ಎಂಬ ಗ್ರೀಕ್ ಪದವನ್ನು ಬಳಸಲು ಇಷ್ಟಪಡುತ್ತಾರೆ ಎಂದು ಸೇರಿಸಿರಬಹುದು. ಈ ತಂತ್ರವನ್ನು ಬಳಸುವುದರಿಂದಾಗುವ ಸಮಸ್ಯೆಯೆಂದರೆ ಕೆಲವರು ನಿರ್ದಿಷ್ಟ ಗ್ರೀಕ್ ಪರಿಕಲ್ಪನೆಯಾದ ಯೂಡೈಮೋನಿಯಾವನ್ನೇ (ಸಾಂಪ್ರದಾಯಿಕವಾಗಿ ಇದನ್ನು 'ಸಂತೋಷ' ಎಂದು ಅನುವಾದಿಸಲಾಗುತ್ತದೆ ಆದರೆ ಇದು ಎಷ್ಟೋ ಅಂಶಗಳಲ್ಲಿ ನಾವು ಪ್ರತಿನಿತ್ಯ ಬಳಸುವ ಪರಿಕಲ್ಪನೆಗಿಂತ ಸಾಕಷ್ಟು ಭಿನ್ನವಾಗಿದೆ) ಬಳಸಲು ಇಷ್ಟಪಟ್ಟರೆ ಇನ್ನೂ ಕೆಲವರು ಬೇರೆ ಯಾವುದೇ ನಿರ್ದಿಷ್ಟ ಸಂಕೇತಾರ್ಥಗಳನ್ನು ತಪ್ಪಿಸಬೇಕು ಎನ್ನುವ ಕಾರಣಕ್ಕಾಗಿಯೇ ಅದಕ್ಕೆ ಹಿಂತಿರುಗುತ್ತಾರೆ, ಏಕೆಂದರೆ ಓದುಗರಿಗೆ ಗ್ರೀಕ್ ಪರಿಕಲ್ಪನೆಯ ಜಟಿಲತೆಗಳು ತಿಳಿದಿರುವುದಿಲ್ಲ ಎನ್ನುವುದು ಅವರ ಎಣಿಕೆಯಾಗಿರುತ್ತದೆ.

ಪ್ಲೇಟೋ ಮೊದಲ ಬಾರಿಗೆ ರಿಪಬ್ಲಿಕ್ ಕೃತಿಯಲ್ಲಿ ಒಬ್ಬ ವಯಸ್ಕನಿಗೆ ಒಂದು ಮಗುವಿಗಿಂತ ಹೆಚ್ಚು ಆಹಾರವನ್ನು ಕೊಡಬೇಕು ಎನ್ನುವ ಉದಾಹರಣೆಯನ್ನು ದಾಖಲಿಸಿದ್ದಾರೆ. ಅವರು 'ಒಳ್ಳೆಯದು ಹಾಗೂ ಸುಂದರವಾದುದು ಎರಡನ್ನೂ ಸಹ ಗುರುತಿಸಿದರಾದರೂ ಅವರನ್ನು ಹೇಗೆ ಸರಿಯಾಗಿ ಅರ್ಥೈಸಬೇಕು ಎನ್ನುವ ಕುರಿತು ವಾದ ಮಾಡಲು ಕಾರಣವಿದೆ; ಆದರೆ ಅದು ಇಂಗ್ಲಿಷ್ ಪದಗಳಾದ "ಫೈನ್' (ಚೆನ್ನಾಗಿದೆ) ಅಥವಾ 'ಗುಡ್' (ಒಳ್ಳೆಯದು) ಯಾವ ಅರ್ಥವನ್ನು ಕೊಡುತ್ತದೋ ಅಂತೆಯೇ ವಿಶಾಲವಾದ ಅರ್ಥವನ್ನು ಕ್ಯಾಲೋನ್ ಎನ್ನುವ ಗ್ರೀಕ್ ಪದ ('ಸುಂದರವಾದದು', 'ಉದಾತ್ತವಾದುದು', 'ಒಳ್ಳೆಯದು', 'ಸರಿಯಾದದ್ದು') ಕೊಡುತ್ತದೆ ಎನ್ನುವ ಕಾರಣಕ್ಕಾಗಿ ಅಲ್ಲ. ಜಿ. ಇ. ಮೂರ್ ಅವರು ಸೌಂದರ್ಯವು ನೈತಿಕವಾಗಿ ಒಳ್ಳೆಯದು ಎಂದು ಹೆಚ್ಚು ಸ್ಪಷ್ಟವಾಗಿ ವಾದಿಸಿದ್ದಾರೆ. ವಾಕ್ ಸ್ವಾತಂತ್ರ್ಯದ ಪ್ರಶ್ನೆಯ ಕುರಿತು, ಮುಂದಿನ 8 ನೇ ಅಧ್ಯಾಯವನ್ನು ನೋಡಿ.